ದಶಮಾನೋತ್ಸವ ವರ್ಷ

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಬಸವ ಜಯಂತಿ ನಮನ

ಸಂಪುಟ 8 : ಸಂಚಿಕೆ 5 : ಮೇ 2011 : * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/– : ಬೆಲೆ ₹ 5

ಭ್ರಷ್ಟಾಚಾರದ ವಿರುದ್ಧ ಜನಾಂದೋಲನ :

ಸಹಕಾರಿಗಳ ಧ್ವನಿ ಮೊಳಗಲಿ

ದಿನಾಂಕ : 4–5–2011 ರಂದು ಗುಲ್ಬರ್ಗಾದಲ್ಲಿ ಗುಲ್ಬರ್ಗಾ, ಯಾದಗಿರಿ ಹಾಗೂ ಬೀದರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಹಾಗೂ ಕ್ರೆಡಿಟ್ ಸಹಕಾರಿ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವ್ಯಕ್ತಿತ್ವ ಹಾಗೂ ಅಭಿಪ್ರೇರಣಾ ತರಬೇತಿ ಕಾರ್ಯಕ್ರಮದಲ್ಲಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರ, ಉಪಾಧ್ಯಕ್ಷ ಶ್ರೀ ಗುರುನಾಥಜ್ಯಾಂತೀಕರ್ ನಿರ್ದೇಶಕರುಗಳಾದ ಶ್ರೀ ಶಾಂತಿನಾಥ ಪಂಡಿತ, ಶ್ರೀ ವೈ.ಟಿ. ಪಾಟೀಲ ಮತ್ತು ಪ್ರದೀಪ ದಾಖಿಶೆಟ್ಟಿ ಇತರರಿದ್ದಾರೆ. ಬಲ ಚಿತ್ರದಲ್ಲಿ 'ಪತ್ರಿಕಾ ಗೋಷ್ಠಿ'ಯಲ್ಲಿ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್‌ಚಂದ್ರ ಮಾತನಾಡುತ್ತಿರುವುದು. ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ.......... 2
ಸೌಹಾರ್ದ ಸಹಕಾರಿಗಳ ಸಮಾಚಾರಗಳು.......... 3,4,5
ಲೇಖನ 6,7
ನಿಮ್ಮ ಪ್ರಶ್ನೆ ನಮ್ಮ ಉತ್ತರ.......... 8,9
ಶಾಸನಬದ್ಧ ಲೆಕ್ಕ ಪರಿಶೋಧನೆ 10,11,12

ಸೌಹಾರ್ದ ಸಹಕಾರಿಗಳ ಸಂಖ್ಯೆ : 1672 - 'ಇ' ಸ್ಟ್ಯಾಂಪಿಂಗ್ ಕೇಂದ್ರಗಳ ಸಂಖ್ಯೆ - 554

ಅಧ್ಯಕ್ಷರ ನುಡಿ....

ದಕ್ಷ ಆಡಳಿತ ಮಂಡಳಿ, ಪ್ರಾಮಾಣಿಕ ಸಿಬ್ಬಂದಿ ವರ್ಗದವರ ಪ್ರಯತ್ನದಿಂದ ಇದನ್ನು ಸಾಧಿಸಬಹುದಾಗಿದೆ. ವೃತ್ತಿಕೃತ ಆಡಳಿತಕ್ಕೆ (Proffessional Management) ಹೆಚ್ಚು ಮಹತ್ವ ನೀಡಬೇಕು. ಉತ್ತಮ ಸಾರ್ವಜನಿಕ ಸಂಬಂಧವನ್ನು ಬೆಳೆಸಬೇಕು. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಬೇಕು. ಅಧ್ಯಯನ ಮಾಡಬೇಕು. ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ನಿರಂತರ ಭಾಗವಹಿಸಬೇಕು.

ಸೌಹಾರ್ದ ಸಹಕಾರಿಗಳು ಬಡ್ಡಿಯೇತರ ಆದಾಯದತ್ತ ಗಮನ ಹರಿಸುವುದು ಇಂದಿನ ಅಗತ್ಯತೆ

ಸಹಕಾರಿ ಕ್ಷೇತ್ರಕ್ಕೆ 106 ವರ್ಷಗಳ ಇತಿಹಾಸವಿದೆ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇಂದು ದಶಕದ ಇತಿಹಾಸವಿದೆ. ಈ ಎರಡು ವಿಧವಾದ ಸಹಕಾರಿ ಸಂಸ್ಥೆಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳನ್ನು ಗಮನಿಸಿದಾಗ ಹಳೆಯ ಕಾಯ್ದೆಯ ಸಹಕಾರಿ ಸಂಸ್ಥೆಗಳು ಹೆಚ್ಚಿನವು ಬಡ್ಡಿಯೇತರ ಆದಾಯ ಸಂಗ್ರಹಕ್ಕೆ ಮಹತ್ವ ಕೊಡದೆ ಕೇವಲ ಠೇವಣಿ ಸಂಗ್ರಹಣೆ, ಸಾಲ ವಿಲೇವಾರಿ ಮತ್ತು ತಮ್ಮ ಸಾಂಪ್ರದಾಯಿಕ ಚಟುವಟಿಕೆಗಳಿಗೆ ಕೇಂದ್ರೀಕೃತವಾಗಿ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಸದಸ್ಯರ ದಿನನಿತ್ಯದ ಬೇಕುಬೇಡಿಕೆಗಳ ಬಗ್ಗೆ ಅವರಿಗೆ ಒದಗಿಸಬಹುದಾದ ಇತರೆ ಸೌಲಭ್ಯಗಳಿಗೆ ಹೆಚ್ಚು ಗಮನ ಹರಿಸದಿರುವುದು ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಆದರೆ ಸೌಹಾರ್ದ ಸಹಕಾರಿಗಳು ಕೇವಲ ಒಂದು ದಶಕದಲ್ಲಿಯೇ ಸಾರ್ವಜನಿಕರ ಹಾಗೂ ಸರಕಾರದ ಮತ್ತು ಸಹಕಾರಿಗಳ ಗಮನಸೆಳೆಯುವಲ್ಲಿ ಸಫಲತೆಯನ್ನು ಕಂಡುಕೊಂಡಿವೆ. ಇದಕ್ಕೆ ಕಾರಣ ಹೆಚ್ಚಿನ ಸೌಹಾರ್ದ ಸಹಕಾರಿಗಳು ಠೇವಣಿ ಸಂಗ್ರಹಣೆ, ಸಾಲ ವಿಲೇವಾರಿಯ ಜೊತೆಗೆ ಬಡ್ಡಿಯೇತರ ಆದಾಯ ಸಂಗ್ರಹಣೆಗೆ ಆದ್ಯತೆ ನೀಡುತ್ತಿರುವುದು ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಸ್ವಾಯತ್ತ ಸಂಸ್ಥೆಗಳಾಗಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಇದುವರೆಗೆ 1650 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಉತ್ತಮ ಕಾರ್ಯನಿರ್ವಹಿಸುತ್ತಿವೆ.

ಸಮಾಜದ ಕಟ್ಟಕಡೆಯ ವ್ಯಕ್ತಿಯ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಕ್ಷೇತ್ರ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಸೇವೆ ಸಲ್ಲಿಸುವ ಅವಕಾಶಗಳಿವೆ. ಈ ಅವಕಾಶಗಳನ್ನು ಸದುಪಯೋಗಮಾಡಿಕೊಂಡು ಕಾರ್ಯನಿರ್ವಹಿಸುವ ಜವಾಬ್ದಾರಿ ಈ ಕ್ಷೇತ್ರಕ್ಕೆ ಇದೆ. ಸಾಕಷ್ಟು ಪೈಪೋಟಿಯಿರುವ ಇಂದಿನ ಅರ್ಥವ್ಯವಸ್ಥೆಯಲ್ಲಿ ಸೌಹಾರ್ದ ಸಹಕಾರಿಗಳು ದಕ್ಷತೆ ಹಾಗೂ ಪ್ರಾಮಾಣಿಕ ಪ್ರಯತ್ನಗಳಿಂದ ಸವಾಲುಗಳನ್ನು ಎದುರಿಸುವಲ್ಲಿ ಸಫಲತೆ ಸಾಧಿಸಬಹುದಾಗಿದೆ. ದಕ್ಷ ಆಡಳಿತ ಮಂಡಳಿ, ಪ್ರಾಮಾಣಿಕ ಸಿಬ್ಬಂದಿ ವರ್ಗದವರ ಪ್ರಯತ್ನದಿಂದ ಇದನ್ನು ಸಾಧಿಸಬಹುದಾಗಿದೆ. ವೃತ್ತಿಕೃತ ಆಡಳಿತಕ್ಕೆ (Proffessional Management) ಹೆಚ್ಚು ಮಹತ್ವ ನೀಡಬೇಕು. ಉತ್ತಮ ಸಾರ್ವಜನಿಕ ಸಂಬಂಧವನ್ನು ಬೆಳೆಸಬೇಕು. ಉತ್ತಮವಾಗಿ ಕಾರ್ಯ್ನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಭೇಟಿನೀಡಬೇಕು.ಅಧ್ಯಯನ ಮಾಡಬೇಕು. ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ನಿರಂತರ ಭಾಗವಹಿಸಬೇಕು. ಹೊಸ ಹೊಸ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ಅವುಗಳ ಅನುಷ್ಠಾನಕ್ಕೆ ಕಾರ್ಯ ಯೋಜನೆ ಸಿದ್ಧಪಡಿಸಿ ಅನುಷ್ಠಾನಮಾಡಬೇಕು.

ಸೌಹಾರ್ದ ಸಹಕಾರಿಗಳು ಠೇವಣಿ ಸಂಗ್ರಹಣೆ, ಸಾಲ ವಿಲೇವಾರಿಯ ಜೊತೆಗೆ ಸದಸ್ಯರಿಗೆ ಒದಗಿಸಬಹುದಾದ ಸೌಲಭ್ಯಗಳ ಬಗ್ಗೆ ನಿರಂತರ ಚಿಂತನೆ ಮಾಡುತ್ತಿರಬೇಕು. ಸದಸ್ಯರ ಜೀವ ವಿಮೆ, ಸದಸ್ಯರ ವಾಹನಗಳ ವಿಮೆ, ಏರೋಪ್ಲೇನ್, ರೇಲ್ವೆ ಟಿಕೆಟ್ ಹಾಗೂ ಬಸ್ ಟಿಕೆಟ್‌ಗಳನ್ನು ಮಾಡಿಸಿಕೊಡುವುದು, ಸದಸ್ಯರ ಹಣ ಹೂಡಿಕೆಯಲ್ಲಿ ಸಲಹೆ ನೀಡುವುದು, ಷೇರುಮಾರುಕಟ್ಟೆ ವ್ಯವಹಾರ ಮಾಡುವುದು, ಸದಸ್ಯರ ಮಕ್ಕಳ ಶಿಕ್ಷಣಕ್ಕೆ ಹಾಗೂ ಭವಿಷ್ಯದ ಯೋಜನೆಗಳನ್ನು ನಿರೂಪಿಸುವಲ್ಲಿ ಮಹತ್ವದ ಪಾತ್ರವಹಿಸಬಹುದು. ಸದಸ್ಯರು ಮನೆಯಲ್ಲಿ ಸಿದ್ಧಪಡಿಸುವ ವಸ್ತುಗಳ ಮಾರುಕಟ್ಟೆ ವ್ಯವಸ್ಥೆಯಲ್ಲಿ ನೆರವಾಗುವುದು ವೆಸ್ಟರ್ನ್ ಮನಿ ಟ್ರಾನ್ಸಫರ್ ಸೌಲಭ್ಯ ನೀಡುವುದು, ಸದಸ್ಯರ ಹಬ್ಬ ಹರಿದಿನಗಳ ಸಾಮೂಹಿಕ ಆಚರಣೆ ಹಾಗೂ ಅಧ್ಯಯನ ಹಾಗೂ ಪ್ರವಾಸಿ ಕೇಂದ್ರಗಳಿಗೆ ಭೇಟಿನೀಡುವ ಕಾರ್ಯಕ್ರಮಗಳ ವ್ಯವಸ್ಥೆಮಾಡುವುದು ಸದಸ್ಯರ ದಿನ ನಿತ್ಯದ ವಸ್ತುಗಳ ಸಾಮೂಹಿಕ ಸಂಗ್ರಹಣೆ ಹಾಗೂ ವಿಲೇವಾರಿ ಕಾರ್ಯಕ್ರಮ ಹೀಗೆ ಇನ್ನು ಅನೇಕ ಮತ್ತು ಸ್ಥಳೀಯ ವಾತಾವರಣ ಮತ್ತು ಅಗತ್ಯಗಳನ್ನು ಅಧ್ಯಯನ ಮಾಡಿ ನಿರಂತರ ಸೇವಾ ಸೌಲಭ್ಯಗಳನ್ನು ಒದಗಿಸುವ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಿದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನೂ ಎತ್ತರಕ್ಕೆ ಬೆಳೆಯುವ ಎಲ್ಲ ಅವಕಾಶಗಳು ಇವೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಿಯಲ್ಲಿ ಮಾಡುತ್ತಿರುವ ಚಟುವಟಿಕೆಗಳ ಬಗ್ಗೆ ಸಂಯುಕ್ತ ಸಹಕಾರಿಗೆ ತಿಳಿಸಿದಲ್ಲಿ ಬೇರೆಯವರಿಗೆ ಮಾರ್ಗದರ್ಶನಮಾಡಲು ಪ್ರಯೋಜನವಾಗುತ್ತದೆ. ನಿಮ್ಮ ಸಲಹೆ ಸಹಕಾರಗಳಿಗೆ ಸದಾ ಸ್ವಾಗತವಿದೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು.

ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ತರಬೇತಿ

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಇತ್ತೀಚೆಗೆ ಚುನಾವಣೆ ನಡೆದು ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರಿಗೆ ದಿನಾಂಕ: 27–4–2011 ರಂದು ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಮುಖ ಉದ್ದೇಶಗಳು,ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡಲಾಯಿತು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀಎಸ್.ಆರ್. ಸತೀಶಚಂದ್ರರವರು ಎಲ್ಲ ನಿರ್ದೇಶಕರನ್ನು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣಮಾಡಿದರು ಹಾಗೂ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸಹಕಾರಿ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿ ಶ್ರೀ ಸಿ.ಎನ್.ಪರಶಿವಮೂರ್ತಿಯವರ ಪರಿಚಯ ಮಾಡಿಕೊಟ್ಟರು. ಶ್ರೀ ಸಿ.ಎನ್.ಪರಶಿವಮೂರ್ತಿಯವರು ಉಪನ್ಯಾಸ ನೀಡಿ ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ಸೌಹಾರ್ದ ಸಹಕಾರಿಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಿದೆ. ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಕರೆನೀಡಿದರು.

ಪ್ರಗತಿ ಪಥದತ್ತ ಶ್ರೀ ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿ

ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಶ್ರೀ ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿಯು ದಿನದಿಂದ ದಿನಕ್ಕೆ ಉತ್ತಮ ಪ್ರಗತಿಯನ್ನು ಸಾಧಿಸುತ್ತಿದ್ದು ರಾಜ್ಯದ ಉತ್ತಮ ಸೌಹಾರ್ದ ಸಹಕಾರಿಗಳ ಸಾಲಿನಲ್ಲಿ ಗುರುತಿಸಬಹುದಾಗಿದೆ. ಸಣ್ಣ ಸಣ್ಣ ವ್ಯಾಪಾರಿಗಳಿಗೆ, ಬಡವರಿಗೆ, ಮಧ್ಯಮವರ್ಗದವರಿಗೆ ಆರ್ಥಿಕ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಹಾಗೂ ಜನರಲ್ಲಿ ಉಳಿತಾಯ ಮನೋಭಾವವನ್ನು ಬೆಳೆಸುವ ಸದುದ್ದೇಶದಿಂದ 1998 ರಲ್ಲಿ ಕೇವಲ 321 ಜನ ಸದಸ್ಯರಿಂದ 3,71,500 ರೂ.ಗಳ ಶೇರು ಬಂಡವಾಳದೊಂದಿಗೆ ಪ್ರಾರಂಭವಾಗಿದ್ದ ಈ ಸಹಕಾರಿಯು ಪ್ರಸ್ತುತ 2680 ಸದಸ್ಯರನ್ನು, 41,48,000 ಶೇರು ಬಂಡವಾಲ, 34,58,109 ನಿಧಿಗಳು 2,19,35,433 ಠೇವಣಿ, 2,64,67,666 ಸಾಲ ಮತ್ತು ಮುಂಗಡಗಳನ್ನು 3,26,07,637 ದುಡಿಯುವ ಬಂಡವಾಳ ಹಾಗೂ 18,42,69,169 ವಾರ್ಷಿಕ ವ್ಯೆವಾಟು ನಡೆಸುತ್ತಿದೆ. 31–3–2011ಕ್ಕೆ 30,66,094 ರೂಗಳ ಲಾಭವನ್ನು ಗಳಿಸಿದೆ.

ಶೇಕಡಾ 80% ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಸಹಕಾರಿಯ ಸದಸ್ಯರ ಮಕ್ಕಳಿಗೆ ಗಿಫ್ಟ್ ಚೆಕ್ ಹಾಗೂ ಪ್ರಶಸ್ತಿ ಪತ್ರ ನೀಡಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಲಾಗುತ್ತದೆ. ಸಹಕಾರಿಯ 2011–12 ರಿಂದ 2015–16 ವರೆಗಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಅವಿರೋಧ ಆಯ್ಕೆ ನಡೆದಿದ್ದು ದಿನಾಂಕ 31–3–2011 ರಂದು ಪಧಾಧಿಕಾರಿಗಳ ಆಯ್ಕೆ ನಡೆದು ಶ್ರೀ ಜಿ.ಎಸ್.ಪಾಟೀಲ ಅಧ್ಯಕ್ಷರಾಗಿ ಶ್ರೀ ಕೆ.ಶಿವಲಿಂಗಪ್ಪ ಉಪಾಧ್ಯಕ್ಷರಾಗಿ, ಆಯ್ಕೆಯಾಗಿರುತ್ತಾರೆ. ನಿರ್ದೇಶಕರಾಗಿ ಶ್ರೀ ಎಸ್. ಎಮ್. ಮಾಗನೂರು, ಶ್ರೀ ಕೆ.ನಾಗಪ್ಪ, ಶ್ರೀ ಎಸ್.ಎಮ್.ಗೌಡರ್, ಶ್ರೀ ಮುರಿಗೇಶಣ್ಣ, ಬಿ.ಕರಿದೇವಿನ, ಶ್ರೀ ಸಿ.ಎಸ್.ಜಂಬಗಿ ಶ್ರೀಮತಿ ರಾಜೇಶ್ವರಿ ಬಿ.ಪಾಟೀಲ್, ಶ್ರೀ ವಿ.ಎಸ್. ಜಂಬಗಿ, ಆಯ್ಕೆಯಾಗಿರುತ್ತಾರೆ.

ಮುಖ್ಯ ಕಾರ್ಯನಿರ್ವಹಣಾಧಿಕಾಯಾಗಿ ಶ್ರೀ ಕೆ.ಎನ್.ಪಾಟೀಲ ಹಾಗೂ ಅವರ ಸಿಬ್ಬಂದಿವರ್ಗದವರು ಸಹಕಾರಿಯ ಅಭಿವೃದ್ಧಿಗೆ ನಿರಂತರ ಪ್ರಾಮಾಣಿಕ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿ.ಎಸ್. ಪಾಟೀಲ
ಅಧ್ಯಕ್ಷರು

ಕೆ. ಶಿವಲಿಂಗಪ್ಪ
ಉಪಾಧ್ಯಕ್ಷರು

ವಿವರಗಳು	ಆರಂಭಿಕ ವರ್ಷ 31–03–1999	ಪ್ರಸ್ತುತ ವರ್ಷ 31–03–2011
ಸದಸ್ಯರು	506	2680
ಶೇರು ಬಂಡವಾಳ	5,77,000	41,48,000
ನಿಧಿಗಳು	–	34,58,109
ಠೇವುಗಳು	11,25,356	2,19,35,433
ಸಾಲ ಮತ್ತು ಮುಂಗಡಗಳು	15,54,765	2,64,67,666
ದುಡಿಯಲು ಬಂಡವಾಳ	16,92,456	3,26,07,637
ವಾರ್ಷಿಕ ವಹಿವಾಟು	82,89,899	18,42,69,169
ಲಾಭ	61,000	30,66,094

ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯಿಂದ IAS/KAS ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ ಹಾಗೂ ತರಬೇತಿ ಶಿಬಿರ

ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗ ಸೌಹಾರ್ದ ಸಹಕಾರಿಯ ನೇತೃತ್ವದಲ್ಲಿ IAS/KAS ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿ ಹಾಗೂ ತರಬೇತಿ ಶಿಬಿರವನ್ನು ದಿನಾಂಕ 09–04–2011 ರಂದು ಬಂಟರ ಭವನದಲ್ಲಿ ಪರಮಪೂಜ್ಯ ಡಾ.ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಹಿರಿಯ ಸಹಕಾರಿ ಮಾಮ್ಕೋಸ್ನ ಉಪಾಧ್ಯಕ್ಷ ಶ್ರೀ ನರಸಿಂಹ ನಾಯಕರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಎಮ್.ಪಿ.ಎಮ್ ಅಧ್ಯಕ್ಷರಾದ ಶ್ರೀ ಅರಗಂ ಜ್ಞಾನೇಂದ್ರರವರು ಆಗಮಿಸಿದ್ದರು.

ಬೆಂಗಳೂರಿನ ಹಿಮಾಲಯ ಸಂಸ್ಥೆಯ ಶ್ರೀ ಕೇಶವರವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಸಹಕಾರಿಯ ಅಧ್ಯಕ್ಷ ಶ್ರೀ ಎಮ್.ಎಮ್.ಲಕ್ಷ್ಮಿನಾರಾಯಣರವರು ಮಾತನಾಡಿ ಕಾರ್ಯಕ್ರಮದಲ್ಲಿ ಭಾಗವಹಿಸಿದ 500 ಜನ ವಿಧ್ಯಾರ್ಥಿಗಳು IAS ಅಥವಾ KAS ಪರಿಕ್ಷೆಯಲ್ಲಿ ಪಾಸ ಆಗಲೇಬೇಕೆಂಬ ಛಲವನ್ನು ಹೊಂದಿ ಈ ಕಾರ್ಯಕ್ರಮದ ಪೂರ್ಣಪ್ರಯೋಜನ ಪಡೆಯಬೇಕೆಂದು ತಿಳಿಸಿದರು. ಮತ್ತೂ ಇಂತಹ ಕಾರ್ಯಕ್ರಮವನ್ನು ಪ್ರತಿ ತಿಂಗಳೂ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತೀರ್ಥಹಳ್ಳಿ ಶಾಸಕ ಶ್ರೀ ಕಿಮ್ಮನೆ ರತ್ನಾಕರ ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಟಿ.ಕೆ. ರಮೇಶ, ಶಿವಮೊಗ್ಗ ಉಪವಿಭಾಗಾಧಿಕಾರಿ ಶ್ರೀಮತಿ ಎಮ್.ಎಲ್. ವೈಶಾಲಿ, ಬಂಟರ ಸಂಘದ ಅಧ್ಯಕ್ಷ ಶ್ರೀ ವಿಠಲಶೆಟ್ಟಿ, ಉಪಾಧ್ಯಕ್ಷ ಶ್ರೀ ಕೆ.ವಿಶ್ವನಾಥ ಶೆಟ್ಟಿ, ಶ್ರೀ ಕೆ.ಎ. ನಜೀರ್ ಮುಂತಾದವರು ಭಾಗವಹಿಸಿದ್ದರು.

ತಾಳಿಕೋಟೆಯ ಕಿರಾಣಿ ಬಜಾರದಲ್ಲಿ ಶ್ರೀ ಸದಾನಂದ ಸೌಹಾರ್ದ ಪತ್ತಿನ ಸಹಕಾರಿ ನಿ., ಪ್ರಾರಂಭೋತ್ಸವ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಅವರು ದೀಪ ಬೆಳಗುತ್ತಿರುವುದು.

ಗುಲಬರ್ಗಾದಲ್ಲಿ ಶ್ರೀ ಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಮಾತನಾಡುತ್ತಿರುವುದು.

ಸಹಕಾರಿಗಳು ಈ ವಿಷಯಗಳನ್ನು ತಿಳಿದಿರಬೇಕು

ಸಂಗ್ರಹ : ಶಂಕರ್ ಹೆಗಡೆ,
ಸಹಕಾರಿ ಸಲಹೆಗಾರರು, ತುಮಕೂರು.

1. ಪ್ರಪಂಚದ ನೂರಕ್ಕು ಹೆಚ್ಚು ದೇಶಗಳಲ್ಲಿ 750 ದಶಲಕ್ಷಕ್ಕಿಂತಲೂ ಹೆಚ್ಚು ಸಹಕಾರಿ ಸದಸ್ಯರಿರುತ್ತಾರೆ.
2. ಅಮೆರಿಕಾದ ಮೂರು ನಾಗರಿಕ ಪೈಕಿ ಒಬ್ಬರು ಸಹಕಾರಿ ಸಂಘದ ಸದಸ್ಯತ್ವವನ್ನು ಪಡಿರುತ್ತಾರೆ.
3. ಬ್ರಿಟನ್ ದೇಶದಲ್ಲಿ ಪತ್ತಿನ ಸಹಕಾರ ಸಂಘಗಳು ಅಂದರೆ ಉಳಿತಾಯ ಮತ್ತು ಲೇವಾದೇವಿ ಸಹಕಾರ ಸಂಘಗಳು ಜನಪ್ರಿಯ ಸಹಕಾರ ಸಂಸ್ಥೆಗಳಾಗಿದ್ದು, ಅತಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ಸಂಸ್ಥೆಗಳಾಗಿರುತ್ತವೆ.
4. ಪ್ರಪಂಚದಲ್ಲಿ ಬ್ರಿಟನ್ ದೇಶದ ನಂತರ ಅತಿ ಹೆಚ್ಚಿನ ಬಳಕೆದಾರರ ಸಹಕಾರ ಸಂಘವನ್ನು ಹೊಂದಿರುವ ದೇಶವೆಂದರೆ 'ಜಪಾನ್'.
5. ಜಗತ್ತಿನ ಸಹಕಾರಿ ಚಳುವಳಿಯ ಶೃಂಗ ಸಂಸ್ಥೆ ಅಂದರೆ ಅಂತರಾಷ್ಟ್ರೀಯ ಮೈತ್ರಿ ಸಂಸ್ಥೆಯು (ಐ.ಸಿ.ಎ) 1895ರಲ್ಲಿ ಲಂಡನ್‌ನಲ್ಲಿ ಸ್ಥಾಪಿಸಲ್ಪಟ್ಟಿತ್ತು.
6. ಬ್ರಿಟನ್ ದೇಶದಲಿ 1867ರಲ್ಲಿ ಪ್ರಥಮ ಕೃಷಿ ಸಹಕಾರ ಸಂಘ ನೋಂದಣಿಗೊಂಡಿತ್ತು.
7. ಏಷ್ಯಾ ಖಂಡದಲ್ಲಿ 442 ದಶಲಕ್ಷ ಸಹಕಾರಿ ಸದಸ್ಯರಿರುತ್ತಾರೆ. ಸಹಕಾರಿ ಚಳುವಳಿಯ ಪಿತಾ ಎಂದು ಹೆಸರು ವಾಸಿಯಾಗಿರುವ 'ರಾಬರ್ಟ್ ಓವೆನ್', ಒಬ್ಬ ಸಾಮಾಜಿಕ ಸುಧಾಕರನಾಗಿದ್ದು, ಪ್ರಾರಂಭದಲ್ಲಿ ಸಹಕಾರಿ ನಾಯಕರಿಗೆ ಪ್ರೇರಣೆ ಸ್ಫೂರ್ತಿ ನೀಡಿದ 'ಪಿತಾಮಹನೆಂದು' ಕರೆಯಲ್ಪಡುತ್ತಾರೆ.
8. ಸ್ವೀಡನ್ ದೇಶದಲ್ಲಿ ಎಲ್ಲಾ ಅರಣ್ಯ ಕೈಗಾರಿಕೆಗಳು ಸಹಕಾರಿ ತಳಹದಿಯ ಮೇಲೆ ನಡೆಯುತ್ತದೆ.
9. ಜಪಾನ್ ದೇಶದ ಸಾಮ್ರಾಟನ ಅರಮನೆಯಲ್ಲಿ ನೌಕರರ ಸಲುವಾಗಿಯೇ ಒಂದು ಸಹಕಾರಿ ಸಂಘ ಸ್ಥಾಪಿಸಲ್ಪಟ್ಟಿವೆ.
10. ಇಂಗ್ಲೆಂಡ್ ದೇಶದ 2001ರಲ್ಲಿ ಜರುಗಿದ ಸಂಸದ್ ಚುನಾವಣೆಯಲ್ಲಿ ಅತಿ ಹೆಚ್ಚು ಅಂದರೆ 29 ಸಹಕಾರಿ ಸಂಸದ್ ಸದಸ್ಯರು ಆಯ್ಕೆಗೊಂಡು ದಾಖಲೆ ಸ್ಥಾಪಿಸಿರುತ್ತಾರೆ.

12ನೇ ಪುಟಕ್ಕೆ...

ಕೇಂದ್ರ ಕಚೇರಿ ನೂತನ ವಿಳಾಸ
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ನಿರ್ಮಾಣ ಭವನ ಆವರಣ , ಡಾ. ರಾಜಕುಮಾರ ರಸ್ತೆ
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ
ಬೆಂಗಳೂರು-560010
ದೂ.ಸಂ :
23378375/76/77/78/79/80
ಹಾಗೂ 23474408, 23573291

ಆಯ್ಕೆ

ಹೆಚ್.ಎಸ್.ಶಿವಶಂಕರ
ಅಧ್ಯಕ್ಷರು

ಶಿವಮೊಗ್ಗ ಜಿಲ್ಲೆಯ ಶ್ರೀ ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 2011-2012 ರಿಂದ 2015-16 ನೇ ಸಾಲಿನ ಆಡಳಿತ ಮಂಡಲಿಯ ಚುನಾವಣೆ ನಡೆದಿದ್ದು ಎಲ್ಲ 15 ಜನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ದಿನಾಂಕ 31-3-2011 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಶ್ರೀ ಹೆಚ್.ಎಸ್.ಶಿವಶಂಕರ ಅಧ್ಯಕ್ಷರಾಗಿ,ಶ್ರೀ ಚಂದ್ರಶೇಖರ ಟಿ.ಎ. ರವರು ಉಪಾಧ್ಯಕ್ಷರಾಗಿ ಮುಂದಿನ ಎರಡುವರೆ ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚಂದ್ರಶೇಖರ ಟಿ.ಎ.
ಉಪಾಧ್ಯಕ್ಷರು

ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ರೂ. 60,17,285 ಲಾಭ

ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ರೂ 60,17,285 ಲಾಭಗಳಿಸಿದೆಯೆಂದು ಸಹಕಾರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಕಳೆದ ಸಾಲಿನಲ್ಲಿ ಈ ಸಹಕಾರಿಯು ರೂ 40,08,976 ಗಳಿಸಿದ್ದು.ಈ ಸಾಲಿನಲ್ಲಿ ಲಾಭ ಹೆಚ್ಚಳಕ್ಕೆ ಸದಸ್ಯರ ಕ್ರೀಯಾಶೀಲತೆ ಹಾಗೂ ಸಕ್ರೀಯ ಭಾಗವಹಿಸುವಿಕೆಯೆ ಕಾರಣವೆಂದು ಸಂಸ್ಥೆಯ ಅಧ್ಯಕ್ಷರಾದ ಚಂದ್ರಕಾಂತ ಪಡಚಣ್ಣನವರ ಸಹಕಾರಿಯ ಅಭಿವೃದ್ಧಿಗೆ ಕಾರಣರಾದ ಎಲ್ಲರಿಗೂ ಕೃತಜ್ಞತೆಗಳನ್ನು ತಿಳಿಸಿದಾರೆ.

ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗೆ 54.45 ಲಕ್ಷ ರೂ.ಗಳ ಲಾಭ

ಬಳ್ಳಾರಿ ಜಿಲ್ಲೆಯ ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕು 2010-11 ನೇ ಸಾಲಿನಲ್ಲಿ 54.45 ತೆರಿಗೆ ಪಾವತಿಸಿದ ನಂತರ ರೂಗಳ ಲಾಭಗಳಿಸಿದೆ. ಕಳೆದ ಸಾಲಿಗೆ ಹೋಲಿಸಿದರೆ ಈ ಸಾಲಿನಲ್ಲಿ ಶೇಕಡಾ 18% ಲಾಭಾಂಶದಲ್ಲಿ ವೃದ್ಧಿಯಾಗಿರುವುದಾಗಿ ಬ್ಯಾಂಕಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ಯಾಂಕಿನ ವರ್ಷಾಂತದ ಅಂಕಿ ಅಂಶಗಳ ಪ್ರಕಾರ 69.24 ಲಕ್ಷ ರೂ.ಗಳ ಶೇರು ಬಂಡವಾಲ 3000 ಸದಸ್ಯರು 1.52 ಕೋಟಿರೂಗಳ ಸ್ವಂತ ಬಂಡವಾಳ 29.46 ಕೋಟಿ ದುಡಿಯುವ ಬಂಡವಾಲ 14.55 ಕೋಟಿರೂ ಹೂಡಿಕೆಗಳು, 26.57 ಕೋಟಿ ರೂಗಳ ಠೇವಣಿ, 11.23 ಕೋಟಿರೂಗಳ ಸಾಲ ಮತ್ತು ಮುಂಗಡಗಳು 0% ಅನುತ್ಪಾದಕ ಆಸ್ತಿ ಇರುತ್ತವೆಯೆಂದು ಬ್ಯಾಂಕು ಆರ್ಥಿಕ ಸ್ಥಿರತೆಯನ್ನು ಹೊಂದಿದೆಯೆಂದು ಬ್ಯಾಂಕಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಕೆ.ಎಸ್.ನಾಗರಾಜ ಉಪಾಧ್ಯಕ್ಷರಾಗಿ ಶ್ರೀ ಸಿ.ರವಿಶಂಕರ ಮತ್ತು ಆಡಳಿತ ಮಂಡಳಿ ಸದಸ್ಯರಾಗಿ ಶ್ರೀ ಕೆ.ಎಸ್.ನಾಗರಾಜ, ಶ್ರೀ ಸಿ ರವಿಶಂಕರ,ಶ್ರೀ ಅಂಕುಮನಾಳ ಸಿದ್ದಪ್ಪ, ಶ್ರೀ ಜೋತಿ ನಂಜುಂಡಪ್ಪ ಶ್ರೀ ಭೋಜ ವೀರಭದ್ರಪ್ಪ ಶ್ರೀ ಬಿ.ಚಂದ್ರಶೇಖರ, ಶ್ರೀ ಕೆ.ವೀರಪ್ಪ, ಶ್ರೀಮತಿ ಬಿ.ಗಂಗಮ್ಮ ಶ್ರೀ ಬೊಮ್ಮಯ್ಯ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೊಯ್ಸಳ ಕ್ರೆಡಿಟ್ ಸೌಹಾರ್ದ ಸಹಕಾರಿ ಚಳ್ಳಕೆರೆಗೆ 64.17 ಲಕ್ಷ ರೂ.ಗಳ ಲಾಭ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಹೊಯ್ಸಳ ಕ್ರೆಡಿಟ್ ಸೌಹಾರ್ದ ಸಹಕಾರಿಯು 2010-11 ನೇ ಸಾಲಿನಲ್ಲಿ 64.17 ಲಕ್ಷ ರೂಗಳ ಲಾಭಗಳಿಸಿದೆಯೆಂದು ಸಹಕಾರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

25 ಕೋಟಿ ರೂಗಳ ದಾಖಲೆ ವ್ಯವಹಾರ ನಡೆಸಿದ ಇ ಸಹಕಾಯು 100 ಲಕ್ಷ ರೂ.ಗಳ ಶೇರು ಬಂಡವಾಳ, ಠೇವಣಿ ಹಾಗೂ ದುಡಿಯುವ ಬಂಡವಾಳವಾಗಿ 1024 ಲಕ್ಷ ರೂ.ಗಳು, ಸಾಲ ಮತ್ತು ಮುಂಗಡಗಳಲ್ಲಿ ರೂ. 910 ಲಕ್ಷ ರೂ.ಗಳು, ಅನುತ್ಪಾದಕ ಆಸ್ತಿ ಪ್ರಮಾಣ 0% ರೂ, 198 ಲಕ್ಷ ರೂ.ಗಳ ಸ್ವಂತ ಬಂಡವಾಳ ರೂ 95 ಲಕ್ಷ ರೂ.ಗಳ ಕಾಯ್ದಿಟ್ಟ ನಿಧಿಗಳು ಇದ್ದು ಸಂಸ್ಥೆಯು ಕಳೆದ 5 ವರ್ಷಗಳಿಂದ ಸತತವಾಗಿ ಲಾಭಾಂಶವನ್ನು ಶೆ.20ರಂತೆ ನೀಡುತ್ತ ಬಂದಿದೆಯೆಂದು ಸಹಕಾರಿಯ ಜನರಲ್ ಮೆನೆಜರ ಶ್ರೀ ಎಸ್.ಕೆ.ಮರಳಿಯವರು ತಿಳಿಸಿದ್ದಾರೆ.

ಶಿವಮೊಗ್ಗದಲ್ಲಿ ಅವಲೋಕನಾ ಸಭೆ

ಸಂಯುಕ್ತ ಸಹಕಾರಿಯ 2011-12 ನೇ ಸಾಲಿನ ಪ್ರಥಮ ಜಿಲ್ಲಾ ಅವಲೋಕನಾ ಸಭೆಯು ದಿನಾಂಕ 25-4-2011 ರಂದು ಶಿವಮೊಗ್ಗದ ವಿಪ್ರ ಸೌಹಾದ್ ಸಹಕಾರಿಯ ಸಭಾಂಗಣದಲ್ಲಿ ನಡೆಸಲಾಯಿತು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ಅಧ್ಯಕ್ಷತೆ ವಹಿಸಿ ನಡೆಸಿಕೊಟ್ಟ ಈ ಸಭೆಯಲ್ಲಿ ಜಿಲ್ಲಾ ನಿರ್ದೇಶಕ ಶ್ರೀ ರವಿಕುಮಾರವರು ಉಪಸ್ಥಿತರಿದ್ದು ಜಿಲ್ಲೆಯ ಸೌಹಾದ್ ಸಹಕಾರಿಗಳ ಅಭಿವೃದ್ಧಿಗೆ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಮಾತನಾಡಿದರು ಕಾರ್ಯಕ್ರಮದಲ್ಲಿ ಜಿಲ್ಲೆಯ 23 ಸೌಹಾರ್ದ ಸಹಕಾರಿಗಳ 41 ಪ್ರತಿನಿಧಿಗಳು ಭಾಗವಹಿಸಿದ್ದರು. ಈಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಒಬ್ಬ ಅಧಿಕಾಯನ್ನು ನಿಯೋಜಿಸಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಮೇಲುಸ್ತುವಾರಿ ಹಾಗೂ ಮಾರ್ಗದರ್ಶನಕ್ಕೆ ಅವಕಾಶಮಾಡಿಕೊಡಬೇಕೆಂದು ಸಭೆಯಲ್ಲಿ ಸಂಯುಕ್ತ ಸಹಕಾರಿ ಕ್ರಮವಿಡಬೇಕೆಂದು ಅಧ್ಯಕ್ಷರನ್ನು ವಿನಂತಿಸಲಾಯಿತು.

ವ್ಯಾಪಕವಾಗಿ ಹಬ್ಬಿರುವ ಭ್ರಷ್ಟಾಚಾರಕ್ಕೆ ಕಡಿವಾಣದ ಅನಿವಾರ್ಯತೆ

ಲೋಕನಾಯಕ ಜಯಪ್ರಕಾಶ್ ನಾರಾಯಣ್, ಅಬ್ದುಲ್ ಕಲಾಂ, ಅಣ್ಣಾ ಹಝಾರೆ ಹಾಗೂ ಇನ್ನಿತರ ಹಿರಿಯರ ಆಶಯದಂತೆ, ಭ್ರಷ್ಟಾಚಾರ ಮುಕ್ತವಾದ ಸಮಾಜದ ನಿರ್ಮಾಣಕ್ಕಾಗಿ ಎಲ್ಲ ಸಹಕಾರಿಗಳೂ ಸಹಕರಿಸಿ ಇತರರಿಗೂ ಮೇಲ್ಪಂಕ್ತಿ ಹಾಕಿ ತೋರಿಸೋಣ. ಸಹಕಾರಿ ಕ್ಷೇತ್ರದ ವ್ಯಾಪಕತೆಯನ್ನು ಗಮನಿಸಿದರೆ ಎಲ್ಲ ಹಂತಗಳಲ್ಲೂ ಪರಿವರ್ತನೆ ಸಾಧ್ಯ





ಭ್ರಷ್ಟಾಚಾರ ತಡೆಯಲು ಸಾಧ್ಯವೇ ಇಲ್ಲ ಎಂದು ಜಗತ್ತೇ ಒಪ್ಪಿಕೊಂಡಿರುವ ಈ ದಿನಗಳಲ್ಲಿ "ಭಾರತ ರತ್ನ" ಪ್ರಶಸ್ತಿ ಪಡೆದ ಅಣು ವಿಜ್ಞಾನಿ ಹಾಗೂ ಮಾಜಿ ರಾಷ್ಟ್ರಪತಿಗಳಾದ ಡಾ ಎ.ಪಿ.ಜೆ ಅಬ್ದುಲ್ ಕಲಾಂ ಇವರ ಪ್ರಕಾರ ಎರಡು ರೀತಿಯ ವ್ಯಕ್ತಿ ಸಮೂಹಗಳಿಂದ ಭ್ರಷ್ಟಾಚಾರ ನಿವಾರಣೆ ಸಾಧ್ಯ. ಮೊದಲನೆ ಗುಂಪು ಮಕ್ಕಳ ತಂದೆ ತಾಯಂದಿರು. ಎರಡನೆಯದು ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳು.

ಇವರುಗಳು ಸೂಕ್ತ ಮಾರ್ಗದರ್ಶನದ ಜೊತೆಗೆ ಅವರ ಮೇಲ್ಪಂಕ್ತಿಯಿಂದ ಭ್ರಷ್ಟಾಚಾರ ತಡೆಯಲು ಸಾಧ್ಯವಿದೆ. ಆದರೆ...?

ನಾವು ಆರ್ಥಿಕ ಕ್ಷೇತ್ರದಲ್ಲಿ ನಮ್ಮನ್ನು ತೊಡಗಿಸಿಕೊಂಡು. ಸಾಮಾಜಿಕ ಬದಲಾವಣೆಯ ಜವಾಬ್ದಾರಿಯೂ ನಮ್ಮಂತಹ 'ಸಹಕಾರಿ'ಗಳ ಮೇಲಿದೆ. ಹಣ ಎಂಬುದು ಶುದ್ಧ ನೀರಿನಂತೆ. ಇವು ಎಲ್ಲಾ ಕೆಲಸಗಳಿಗೂ ಬೇಕಾಗಿದೆ. ಶುದ್ಧತೆ ಎಲ್ಲರ ಬದುಕಿಗೆ ಅನಿವಾರ್ಯ. ಮನುಸ್ಮೃತಿಯಲ್ಲಿನ ಉಲ್ಲೇಖ ಈ ರೀತಿ ಇದೆ: "ಎಲ್ಲ ಶುಚಿ ಕ್ರಿಯೆಗಳಿಗಿಂತಲೂ ಅರ್ಥ ಶೌಚವು ಶ್ರೇಷ್ಠವಾದದ್ದು. ಹಣಕಾಸು ನಡಾವಳಿಗಳಲ್ಲಿ ಯಾರು ಶುಚಿತ್ವ ಕಾಪಾಡಿಕೊಳ್ಳುವುದಿಲ್ಲವೋ ಅವನನ್ನು ಯಾವ ಮೃತ್ತಿಕೆಯಾಗಲಿ, ಸ್ನಾನವಾಗಲಿ ಶುದ್ಧಗೊಳಿಸದು."

ಒಂದು ಕಾಲದಲ್ಲಿ ಸಹಕಾರಿ ಕ್ಷೇತ್ರವೂ ಶುದ್ಧವಾಗಿತ್ತು. ಆದರೆ 1975 ರಿಂದ ಅದರ ಶುದ್ಧತೆ ಕಳೆದುಕೊಳ್ಳಲು ಪ್ರಾರಂಭವಾಯಿತು. ಭ್ರಷ್ಟ ರಾಜಕಾರಣಿಗಳಿಂದಾಗಿ ಹೀಗಾಗಿದೆ. 'ಸಹಕಾರ' ಪ್ರಕೃತಿಯ ನಿಯಮ. ಸಂಸ್ಕೃತಿಯ ಜನ್ಮ ತಾಳಲು ಪೂರಕವಾದ ವಾತಾವರಣದ ನಿರ್ಮಾಣಕ್ಕೆ ಇದು ಸಹಕಾರಿ. ಹಾಗಾಗಿ ಸುಸಂಸ್ಕೃತ ಸಮಾಜದ ನಿರ್ಮಾಣ ಹಿಂದೆ ಸಾಧ್ಯವಾಗಿತ್ತು. ಅಸಹಕಾರದ ಫಲವಾಗಿ ನಮ್ಮ ಬದುಕು ವಿಕೃತಿಯ ಪಾಲಾಗುತ್ತಿದೆ. ಪೂರ್ವಜರ ಆಸ್ತಿಯಾದ ಸಂಸ್ಕೃತಿಯ ನಾಶ ನಮ್ಮಿಂದ ಆಗುತ್ತಿದೆ.

ದೊಡ್ಡ ದೊಡ್ಡ ಆರ್ಥಿಕ ಸಂಸ್ಥೆಗಳಿಂದ ಸಾಧ್ಯವಾಗದ್ದನ್ನು 'ಸಹಕಾರಿ'ಗಳು ಮಾಡಲು ಸಾಧ್ಯವಿದೆ ಎಂದು ತೋರಿಸಿದ್ದೇವೆ. ಶುದ್ಧ ನೀರಿನ ಶುದ್ಧತೆಯನ್ನು ಕಾಪಾಡಿಕೊಳ್ಳಲು ಶುದ್ಧವಾದ ಪಾತ್ರೆಯ ಅವಶ್ಯಕತೆ ಇದ್ದಂತೆ, ಶುದ್ಧ ಹಣದ ವ್ಯವಹಾರಕ್ಕಾಗಿ ಶುದ್ಧವಾದ ಸಹಕಾರಿ ಸಂಸ್ಥೆಗಳ ಅನಿವಾರ್ಯತೆ ಇಂದಿನ ದಿನಗಳಲ್ಲಿ ಹೆಚ್ಚಾಗಿದೆ.

ಲಕ್ಷ-ಕೋಟಿಗಳ ಅವ್ಯವಹಾರಗಳ ಸುದ್ದಿಗಳನ್ನು ಕೇಳುತ್ತಿರುವ ಈ ದಿನಗಳಲ್ಲಿ "ಸಂಸ್ಕಾರಯುತ ಶಿಕ್ಷಣ" ಯುವಕ-ಯುವತಿಯರಿಗೆ ನೀಡುವುದರ ಜೊತೆಗೆ 'ಧರ್ಮಾಧಾರಿತ ಅರ್ಥ-ಕಾಮ'ಗಳನ್ನುಗಳಿಸಿಕೊಳ್ಳುವ ಸೂಕ್ತ ಮಾರ್ಗದರ್ಶನ ಮತ್ತು ಮೇಲ್ಪಂಕ್ತಿಯ ಅನಿವಾರ್ಯತೆ ಇದೆ ಎಂಬುದನ್ನು ಜಗತ್ತಿನ ಅತೀ ದೊಡ್ಡ ಸ್ವಯಂಸೇವಾ ಸಂಸ್ಥೆಯ ಇತ್ತೀಚಿನ ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ನಮ್ಮ ನಿಮ್ಮಂತಹ ಸಹಕಾರಿಗಳಿಂದ 'ಸೌಹಾರ್ದಯುತ ಸಹಕಾರ – ಸಂಸ್ಕೃತಿಯ ಹರಿಕಾರ' ಎಂಬುದನ್ನು ಸಾಬೀತುಪಡಿಸಬೇಕಾಗಿದೆ. ಲೋಕನಾಯಕ ಜಯಪ್ರಕಾಶ್ ನಾರಾಯಣ್, ಅಬ್ದುಲ್ ಕಲಾಂ, ಅಣ್ಣಾ ಹಝಾರೆ ಹಾಗೂ ಇನ್ನಿತರ ಹಿರಿಯರ ಆಶಯದಂತೆ, ಭ್ರಷ್ಟಾಚಾರ ಮುಕ್ತವಾದ ಸಮಾಜದ ನಿರ್ಮಾಣಕ್ಕಾಗಿ ಎಲ್ಲ ಸಹಕಾರಿಗಳೂ ಸಹಕರಿಸಿ ಇತರರಿಗೂ ಮೇಲ್ಪಂಕ್ತಿ ಹಾಕಿ ತೋರಿಸೋಣ. ಸಹಕಾರಿ ಕ್ಷೇತ್ರದ ವ್ಯಾಪಕತೆಯನ್ನು ಗಮನಿಸಿದರೆ ಎಲ್ಲ ಹಂತಗಳಲ್ಲೂ ಪರಿವರ್ತನೆ ಸಾಧ್ಯ ಎಂಬ ವಿಶ್ವಾಸ ಮೂಡುತ್ತದೆ.

"ಬನ್ನಿ ಎಲ್ಲರೂ ಒಟ್ಟಾಗಿ ಈ ಅನಿಷ್ಠತೆಯನ್ನು ಹೊಗಲಾಡಿಸಲು ಕೈಜೋಡಿಸೋಣ"

ಎಂ.ಎಸ್. ವೆಂಕಟೇಶ್ ಸಾಗರ್
ಅಧ್ಯಕ್ಷರು, ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.

ಸೌಹಾರ್ದ ಸಹಕಾರಿಗಳ ಅಧಿಕಾರಿ/ಸಿಬ್ಬಂದಿಯವರಿಗಾಗಿ ವಿಶೇಷ ಅಲ್ಪಾವಧಿ ತರಬೇತಿ ಕಾರ್ಯಕ್ರಮ

(5ನೇ ತಂಡ) ಧಾರವಾಡ 20-6-2011 ರಿಂದ 29-6-2011 (ಸಂಪೂರ್ಣ ವ್ಯಕ್ತಿತ್ವ ವಿಕಸನದ ಅರ್ಥಪೂರ್ಣ ತರಬೇತಿ)

A Complete Personality Development Programme for Employees of the Souharda co-operatives. Special Short term Residential Ten Days Training Course for the Employees of the Souharda co-operatives At Dharwad From 20-6-2011 to 29-6-2011

ರಾಜ್ಯದ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಬೆಳವಣಿಗೆಗೆ ಪೂರಕವಾಗುವಂತೆ ಅನೇಕ ವಿವಿಧ ವಿಷಯಗಳ ಬಗ್ಗೆ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವುದು ತಮಗೆಲ್ಲ ತಿಳಿದ ವಿಷಯ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅನೇಕ ಪ್ರತಿನಿಧಿಗಳು ಸೌಹಾರ್ದ ಸಹಕಾರಿಗಳ ಅಧಿಕಾರಿ/ಸಿಬ್ಬಂದಿಯವರಿಗಾಗಿ ಒಂದು ದೀರ್ಘಾವಧಿಯ ತರಬೇತಿ ವ್ಯವಸ್ಥೆಯ ಅವಶ್ಯಕತೆಯ ಬಗ್ಗೆ ಪ್ರಸ್ತಾಪಮಾಡಿದ ಹಿನ್ನಲೆಯಲ್ಲಿ ಹಾಗೂ ಇತ್ತೀಚೆಗೆ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಸಮಾಲೋಚನಾ ಸಭೆಗಳನ್ನು ಅವಲೋಕನಾ ಸಭೆಗಳನ್ನು ನಡೆಸಿದಾಗ ಭಾಗವಹಿಸಿದ ಪ್ರತಿನಿಧಿಗಳೂ ಸಹ ಒಂದು ದೀರ್ಘಾವಧಿಯ ತರಬೇತಿ ವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿರುವ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು 10 ದಿನಗಳ ಒಂದು ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಈಗಾಗಲೆ ಗದಗ ಜಿಲ್ಲೆಯ ಹುಲಕೋಟಿಯ ಕೆ.ಹೆಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ, ಕುಪ್ಪಳ್ಳಿಯಲ್ಲಿ, ಕೆಮ್ಮಣ್ಣುಗುಂಡಿಯಲ್ಲಿ ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿತ್ತೆಂದು ಹಾಗು ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಮತ್ತು ಅತಿಥಿಗಣ್ಯರು ಅಭಿಪ್ರಾಯ ನೀಡಿದ್ದಾರೆ.

ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಸಿಬ್ಬಂದಿವರ್ಗದವರಿಗಾಗಿಯೇ ವಿಶೇಷವಾಗಿ ಹಮ್ಮಿಕೊಳ್ಳುತ್ತಿರುವ ಈ ತರಬೇತಿ ಅತ್ಯಂತ ಮಹತ್ವದ್ದಾಗಿದೆ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ದೃಷ್ಟಿಯಿಂದ ಈ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಭ್ಯರ್ಥಿಗಳನ್ನು ಕಳುಹಿಸುವುದು ಸೌಹಾರ್ದ ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ.

ಕಾರ್ಯಕ್ರಮದಲ್ಲಿ 40 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ. ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಪುರುಷ ಅಭ್ಯರ್ಥಿಗಳಿಗೆ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ತರಬೇತಿಯ ನಂತರದಲ್ಲಿ ಪ್ರಮಾಣ ಪತ್ರ ನೀಡಲಾಗುವುದು. ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿ ಸಂಸ್ಥೆಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗು ಪ್ರಯಾಣ ವೆಚ್ಚವನ್ನು ತಾವೇ ಭರಿಸಬೇಕು.

ಸಂಯುಕ್ತ ಸಹಕಾರಿಯು ಲಗತ್ತಿಸಿದ ನೊಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿಮಾಡಿ ಅಭ್ಯರ್ಥಿಯ ಪಾಸಪೋರ್ಟ ಫೋಟೊ ಲಗತ್ತಿಸಿ ಕಳುಹಿಸಿ. ನಿಮ್ಮ ಸೀಟು ಕಾಯ್ದಿರಿಸಿಕೊಳ್ಳಲು ಸೂಚಿಸಿದೆ. ತರಬೇತಿಗೆ ಹಾಜರಾಗುವ ಪ್ರತಿನಿಧಿಗಳಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಿದೆ.

ಪ್ರಸ್ತುತ 5 ನೇ ತಂಡದ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 20-6-2011 ರಿಂದ 29-6-2011ರವರೆಗೆ ಜಿಲ್ಲಾ ತರಬೇತಿ ಕೇಂದ್ರ (ಕರ್ನಾಟಕ ಸರಕಾರ) ಗಾಂಧೀನಗರ ಧಾರವಾಡದಲ್ಲಿ ಹಮ್ಮಿಕೊಳ್ಳಲಾಗಿದೆ. ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತೆ ಇವೆ.

1. ಭಾಗವಹಿಸುವ ವರ್ಗ	:	ಕಾರ್ಯದರ್ಶಿಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಅಧಿಕಾರಿಗಳು ಹಾಗು ಸಿಬ್ಬಂದಿವರ್ಗದವರು.
2. ತರಬೇತಿಯ ಅವದಿ	:	10 ದಿನಗಳು. (8 ದಿನಗಳು ಒಳಾಂಗಣ ಹಾಗು 2ದಿನಗಳು ಹೊರಾಂಗಣ)
3. ತರಬೇತಿಯ ಸ್ಥಳ	:	"ಜಿಲ್ಲಾ ತರಬೇತಿ ಕೇಂದ್ರ" (ಕರ್ನಾಟಕ ಸರಕಾರ) ಗಾಂಧೀನಗರ, ಧಾರವಾಡ
4. ತರಬೇತಿ ಸೌಲಭ್ಯ	:	ಊಟ, ಉಪಹಾರ, ವಸತಿ, ಅಧ್ಯಯನ, ಸಾಹಿತ್ಯ, ಯೋಗ ತರಬೇತಿ, ಆರೋಗ್ಯ ತಪಾಸಣೆ ಹಾಗೂ ಉತ್ತಮ ಸಹಕಾರಿಗಳ ಅಧ್ಯಯನ ಭೇಟಿ.
5. ತರಬೇತಿ ಶುಲ್ಕ	:	ರೂ. 5000/-(ಐದು ಸಾವಿರಗಳು) ಭಾಗವಹಿಸುವ ಸಹಕಾರಿ ಸಂಸ್ಥೆಗಳಿಂದ ಭರಿಸಬೇಕು
6. ಅಭ್ಯರ್ಥಿಗಳ ಸಂಖ್ಯೆ	:	40 ಮಾತ್ರ.
7. ತರಬೇತಿಯ ದಿನಾಂಕ	:	20-6-2011 ರಿಂದ 29-6-2011
6. ತರಬೇತಿ ವಿಷಯಗಳು	:	ಸಹಕಾರ ತತ್ವಗಳು – ಸಹಕಾರಿ ಪರಿಸರ – ಸಹಕಾರಿಯ ಉಪವಿಧಿಗಳು – ಸೌಹಾರ್ದ ಸಹಕಾರಿಗಳ ಆಡಳಿತ ವ್ಯವಸ್ಥೆ ಸಭೆಗಳು – ಸಭೆಗಳನ್ನು ನಡೆಸುವ ವಿಧಾನ – ನಡುವಳಿಕೆಗಳನ್ನು ದಾಖಲಿಸುವುದು – ಕ್ರಮವಿಡುವುದು – ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳು ಇತರೆ ಕಾಯ್ದೆಗಳು ಹಾಗೂ ಮುಖ್ಯಾಂಶಗಳು – ಲೆಕ್ಕಪತ್ರಗಳ ವಿಧಾನಗಳು – ಲೆಕ್ಕಪರಿಶೋಧನೆ ಸಿದ್ಧತೆ – ಗಣಕೀಕರಣ – ಮಾನವ ಸಂಪನ್ಮೂಲ ಅಭಿವೃದ್ಧಿ ವಿಧಾನಗಳು – ಹಣಕಾಸಿನ ಆಡಳಿತ – ಸಾಲ ನಿರ್ವಹಣೆ ದಾಖಲಾತಿ ವಿಧಾನಗಳು – ಸಾಲ ವಸೂಲಾತಿ ವಿಧಾನಗಳು – ವಿವಿಧ ರೀತಿಯ ಠೇವಣಿಗಳ ಸಂಗ್ರಹಣೆ ಹಾಗೂ ಲಾಭದಾಯಕ ರೀತಿಯಲ್ಲಿ ವಿನಿಯೋಗ – ಗ್ರಾಹಕಸೇವೆ – ಸಾರ್ವಜನಿಕ ಸಂಪರ್ಕ ಹಾಗೂ ಪ್ರಚಾರದ ಮಹತ್ವ ಹಾಗೂ ವಿಧಾನಗಳು – ಇ-ಸ್ಟಾಂಪಿಂಗ್ – ಹರಿದ ನೋಟುಗಳ ನಿರ್ವಹಣೆ – ಆರೋಗ್ಯ – ಕ್ರಿಯಾಶೀಲತೆ ವೃದ್ಧಿಸುವ ಚಟುವಟಿಕೆಗಳು ಆಂತರಿಕ ಸಂಬಂಧಗಳ ನಿರ್ವಹಣೆ – ಒತ್ತಡ ನಿರ್ವಹಣೆ – ಸಮಯ ನಿರ್ವಹಣೆ – ಮಾನವೀಯ ಸಂಬಂಧಗಳ ನಿರ್ವಹಣೆ ಸಹಕಾರ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನದ ಪ್ರಾಮುಖ್ಯತೆ ಹಾಗು ಅಳವಡಿಸುವ ವಿಧಾನ ಹಾಗು ಇತರೆ ಮಹತ್ವದ ಪೂರಕ ಅಗತ್ಯ ವಿಷಯಗಳು.



ಎಸ್. ಜಿ. ಜೋಶಿ

ರಾಜ್ಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ನಡೆದ ಪ್ರಶ್ನೋತ್ತರ ಅಧಿವೇಶನದಲ್ಲಿನ ಆಯ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು, ಎಲ್ಲ ಸೌಹಾರ್ದ ಸಹಕಾರಿಗಳ ಮಾಹಿತಿ ಹಾಗೂ ಅನುಕೂಲತೆಗಾಗಿ ಪ್ರಕಟಿಸಲಾಗಿದೆ. "ಕಲಂ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ, "ನಿಯಮ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮಗಳು ಎಂದು ಓದಿಕೊಳ್ಳತಕ್ಕದ್ದು.

ಶ್ರೀಕಾಂತ್ ಬರುವೆ

ಉತ್ತರಿಸಿದವರು : ಶ್ರೀ ಎಸ್.ಜಿ. ಜೋಶಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಸೂಲಿ ಅಧಿಕಾರಿ, ರೈತ ಸಹಕಾರ ಬ್ಯಾಂಕ್, ಧಾರವಾಡ

ನೆರವು : ಶ್ರೀ ಕಾಂತ್ ಬರುವೆ, ಕಾನೂನು ವಿಭಾಗದ ಅಧಿಕಾರಿ, ಸಂಯುಕ್ತ ಸಹಕಾರಿ.

ನಿಮ್ಮ ಪ್ರಶ್ನೆ ನಮ್ಮ ಉತ್ತರ

ಮಹಾಲಕ್ಷ್ಮೀ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ

- **ನಿರ್ದೇಶಕರು ಸಾಲತೆಗೆದುಕೊಂಡು ತೀರಿಸದಿದ್ದಾಗ ಅಧ್ಯಕ್ಷರಿಗೆ ತಿಳಿಸಿದರೆ ಸುಮ್ಮನಿರಲು ಹೇಳುತ್ತಾರೆ. ನಿರ್ದೇಶಕರು ಸಾಲಕಟ್ಟದಿದ್ದರೆ ಜವಾಬ್ದಾರಿ ಯಾರು?**

ಕಾಯ್ದೆ ಕಲಂ 25(1) (ಈ)ರನ್ವಯ ನಿರ್ದೇಶಕನು ತಾನು ತೆಗೆದುಕೊಂಡ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದರೆ ಅಂಥಹ ನಿರ್ದೇಶಕನು ಸಹಕಾರಿಯ ನಿರ್ದೇಶಕನಾಗಿ ಮುಂದುವರಿಯಲು ಅನರ್ಹನಾಗುತ್ತಾನೆ.

ಹೆಚ್.ಆಂಜನಪ್ಪ, ಕಾರ್ ಮೊಬೈಲ ಎಂಪ್ಲಾಯೀಸ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು.

- **ಸಹಕಾರಿಯಲ್ಲಿ ಅತಿ ಹೆಚ್ಚೆಂದರೆ ಎಷ್ಟು ಡಿವಿಡೆಂಡ್ ನೀಡಬಹುದು. 25% ಕ್ಕಿಂತ ಹೆಚ್ಚಿಗೆ ನೀಡಿದಲ್ಲಿ ಕಾನೂನು ಉಲ್ಲಂಘನೆಯಾಗುತ್ತದೆಯೆ? ಅದಕ್ಕೆ ಅನುಮತಿಯನ್ನು ಯಾರಿಂದ ಪಡೆಯಬೇಕು?**

ಸಹಕಾರಿಯ ಸಾಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆದು ಡಿವಿಡೆಂಡ್‌ನ್ನು ಉಪವಿಧಿ ನಿರ್ದಿಷ್ಟ ಪಡಿಸಿದ ಮಿತಿಯಲ್ಲಿ ನೀಡಬಹುದಾಗಿರುತ್ತದೆ. ಆದರೆ ಸಹಕಾರಿಯ ಉಪವಿಧಿಯಲ್ಲಿ ಸದಸ್ಯರಿಗೆ ಲಾಭಾಂಶ ಹಂಚಲು ಸೂಕ್ತವಾದ ಪ್ರಾವಧಾನವಿರಬೇಕಾಗುತ್ತದೆ.

ಅಮೃತ, ಕೃಷಿಕ ಸೌಹಾರ್ದ ಸಹಕಾರಿ ನಿ., ಸಾಗರ.

- **ಸೌಹಾರ್ದ ಸಹಕಾರಿಗಳ ನೌಕರರಿಗೆ ಜಿ.ಪಿ.ಎಫ್. ಪಿ.ಎಫ್ ಇತ್ಯಾದಿ ಸೌಲಭ್ಯಗಳಿವೆಯೆ?**

ಸಹಕಾರಿಯ ನೌಕರರಿಗೆ ಪಿ.ಎಫ್ ಸೌಲಭ್ಯ ನೀಡಬಹುದಾಗಿರುತ್ತದೆ. ಆದರೆ ಅದಕ್ಕೆ ಸಹಕಾರಿಯ ಆಡಳಿತ ಮಂಡಳಿಯ ಮತ್ತು ಸಾಮಾನ್ಯ ಸಭೆಯ ಅನುಮೋಧನೆ ಅಗತ್ಯ, ಜಿ ಪಿ ಎಫ್ ಸೌಲಭ್ಯ, ಸರಕಾರಿ ನೌಕರರಿಗೆ ಮಾತ್ರ ಸೀಮಿತವಾಗಿದೆ.

ನವಕರ್ನಾಟಕ ಸೌಹಾರ್ದ ಸಹಕಾರಿ ನಿ., ಗಂಗಾವತಿ

- **ಸಹಕಾರಿಯ ಸದಸ್ಯರು ಸುಸ್ತಿದಾರರಾಗಿ ನಂತರದಲ್ಲಿ ಎಲ್ಲ ಸಾಲಗಳನ್ನು ಮರುಪಾವತಿಸಿದಾಗ ಅಂಥವರು ಚುನಾವಣೆಗೆ ಸ್ಪರ್ಧಿಸಲು ಅರ್ಹತೆ ಪಡೆಯುತ್ತಾರೆಯೆ?**

ಸೌಹಾರ್ದ ಸಹಕಾರಿ ನಿಯಮಗಳು, 2004 ನಿಯಮ 5(3)ರನ್ವಯ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಚುನಾವಣೆಗೆ 30 ದಿನಗಳ ಮುಂಚೆ ತಾತ್ಕಾಲಿಕ ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು. ಸುಸ್ತಿದಾರರು ಎಲ್ಲ ಸಾಲಗಳನ್ನು ಮರುಪಾವತಿಸಿದ ನಂತರ 21(5)ರಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಯನ್ನು ಹೊಂದಿರದಿದ್ದರೆ ಮತ್ತು ನಿಯಮ 5(4) ರ ಪ್ರಕಾರ ಚುನಾವಣೆಗೆ 15 ದಿನಗಳಿಗೆ ಮುಂಚೆ ಸಹಕಾರಿಯ ಅರ್ಹ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸೇರ್ಪಡೆಯಾದಲ್ಲಿ, ಅಂತವರು ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆ ಪಡೆಯುತ್ತಾರೆ.

ಮೋಹನ್, ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿನಿ., ಬಿಜಾಪುರ.

- ಏಬಿಎಸ್(ಆರ್ಬಿಟ್ರೇಶನ್) ಹಾಕಿದರೂ ನಮ್ಮ ಪರವಾಗಿ ಕೇಸ ಆದಾಗ್ಯೂ ಜಪ್ತಿ ಮಾಡಲಿಕ್ಕೆ ಆದೇಶ ಪಡೆದು ಜಪ್ತಿ ಮಾಡಲಿಕ್ಕೆ ಹೋಗುವ ಮುನ್ನ ಸಾಲ ತೆಗೆದುಕೊಂಡವರು ಹೈಕೋರ್ಟನಿಂದ ತಡೆಯಾಜ್ಞೆ ತಂದಿರುತ್ತಾರೆ ಮುಂದೆ ನಾವೇನು ಮಾಡಬೇಕು?

ತಡೆಯಾಜ್ಞೆ ನೀಡುವಾಗ ಸಹಕಾರಿಗೆ ಇಂತಿಷ್ಟು ಮೊತ್ತವನ್ನು ಜಮಾ ಮಾಡಲು ಸಾಮಾನ್ಯವಾಗಿ ಕರ್ನಾಟಕ ಉಚ್ಚ ನಾಯಾಲಯದಿಂದ ಆದೇಶ ನೀಡಲಾಗಿರುತ್ತದೆ. ತಮ್ಮ ನ್ಯಾಯವಾದಿಯ ಮೂಲಕ ಉಚ್ಚ ನ್ಯಾಯಾಲಯದಲ್ಲಿ ಪ್ರತಿನಿಧಿಸಿರಿ. ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಿ.

- ಆಡಳಿತ ಮಂಡಳಿಯ ಚುನಾವಣೆಯನ್ನು ಎಷ್ಟು ವರ್ಷಕ್ಕೊಮ್ಮೆ ನಡೆಸಬೇಕು?

ಕಲಂ 24(2) ರನ್ವಯ ಪ್ರತಿ 5 ಸಹಕಾರ ವರ್ಷಗಳಿಗೊಮ್ಮೆ ಚುನಾವಣೆಯನ್ನು ನಡೆಸಬೇಕು.

ಭೂಮಿಕಾ ಸೌಹಾರ್ದ ಸಹಕಾರಿ ನಿ., ಹಾವೇರಿ.

- ಸುಸ್ತಿಯಿರುವ ಸಾಲವನ್ನು ವಸೂಲು ಮಾಡಲು ಸಿವಿಲ್ ಕೋರ್ಟಗೆ ದಾವೆ ಹೂಡಬಹುದೆ?

ಕಲಂ 42 ರನ್ವಯ ಸುಸ್ತಿ ಇರುವ ಸಾಲವನ್ನು ವಸೂಲ ಮಾಡಲು ಸಿವಿಲ ನ್ಯಾಯಾಲಯದಲ್ಲಿ ದಾವೆ ಹೂಡಲು ಪ್ರತಿಷೇಧವಿರುತ್ತದೆ. ಕಲಂ 39 ರನ್ವಯ ಸಾಲ ವಸೂಲಾತಿಗಾಗಿ, ಸಂಬಂಧಿಸಿದ ನಿಬಂಧಕರ ನ್ಯಾಯಾಲಯದಲ್ಲಿ ದಾವೆ ಹೂಡಿ ಕಲಂ 41 ರನ್ವಯ ಆದೇಶವನ್ನು ಪಡೆಯಬೇಕಾಗಿರುತ್ತದೆ. ನಂತರ ಸಹಕಾರಿ ಇಲಾಖೆಯ ಮಾರಾಟಾಧಿಕಾರಿಯ ಮೂಲಕ ಸಾಲ ವಸೂಲಾತಿ ಕ್ರಮವನ್ನು ಜರುಗಿಸಿ ಸಾಲ ವಸೂಲ ಮಾಡಬಹುದು. ಅಗತ್ಯವಿದ್ದಲ್ಲಿ ಅಮಲಜಾರಿ ಕ್ರಮಕ್ಕಾಗಿ, ಸಹಕಾರಿಗಳ ಸಹಾಯಕ ನಿಬಂಧಕರ ಅನುಮತಿ ಪಡೆದು ಸಿವಿಲ್ ನ್ಯಾಯಾಲಯದ ಮೂಲಕ ಸಾಲ ವಸೂಲಾತಿ ಕ್ರಮ ಜರುಗಿಸಬಹುದು.

- **ರಿಸರ್ವ ಫಂಡನ್ನು ಹೇಗೆ ಉಪಯೋಗಿಸಬಹುದು?**

ಸೌಹಾರ್ದ ಸಹಕಾರಿ ನಿಯಮಗಳು, 2004 ನಿಯಮ 7(1) ರನ್ವಯ ಒಂದು ಸಹಕಾರಿಯು ತನ್ನ ಮೀಸಲು ನಿಧಿಯನ್ನು ಯಾವುದೇ ಸಹಕಾರಿ ಬ್ಯಾಂಕ್ ಅಥವಾ ಅನಸೂಚಿತ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇಡಬಹುದು ಮತ್ತು ನಿಯಮ 7I(ಎ)ರನ್ವಯ ಮೀಸಲು ನಿಧಿಯನ್ನು ಸಹಕಾರಿಯ ಯಾವುದೇ ವ್ಯವಹಾರಕ್ಕೆ ಬಳಸಿಕೊಳ್ಳತಕ್ಕದ್ದಲ್ಲ ಮತ್ತು ಇದರಲ್ಲಿ ಯಾವುದೇ ಪಾಲು ಸಹಕಾರಿಯ ಸದಸ್ಯರಿಗೆ ಸಲ್ಲತಕ್ಕದ್ದಲ್ಲ.

ಎಸ್.ಸಿ.ಹೊಸಮನಿ, ಹಸಿರು ಸೌಹಾರ್ದ ಸಹಕಾರಿ ನಿ., ಶಿಗ್ಗಾವಿ.

- **ಹೊಸದಾಗಿ ನೊಂದಾಯಿತವಾಗುವ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯನ್ನು ನೇಮಕಾತಿಯ ಬಗ್ಗೆ ನಿಯಮಾವಳಿಗಳಿವೆಯೆ?**

ಸಹಕಾರಿಯು ನೋಂದಣಿಗೊಂಡು ಅಧಿಕೃತವಾಗಿ ವ್ಯವಹಾರ ಪ್ರಾರಂಭಿಸುವುದಕ್ಕೂ ಪೂರ್ವದಲ್ಲಿ ಸಹಕಾರಿಯ ಆಡಳಿತ ಮಂಡಳಿಯು ಮುಖ್ಯ ಕಾರ್ಯನಿರ್ವಣಾಧಿಕಾರಿಯನ್ನು ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ನೇಮಕಾತಿ ಮಾಡಿಕೊಳ್ಳಬಹುದು.

ಭಾರತಿ ಸೌಹಾರ್ದ ಸಹಕಾರಿ ನಿ., ಕಾಪು.

- ಲಾಭಾಂಶ ವಿಲೇವಾರಿ ಮಾಡುವ ವಿಧಾನ ಹೇಗೆ. ನಿಧಿಗಳನ್ನು ಯಾವ ಬ್ಯಾಂಕಿನಲ್ಲಿ ಹೂಡಬೇಕು?

  ಸೌಹಾರ್ದ ಸಹಕಾರಿ ಅಧಿನಿಯಮ, 1997 ಕಲಂ 10(1)(xxi)ಪ್ರಕಾರ ಲಾಭದ ವಿಂಗಡನೆಯನ್ನು ಈ ಕೆಳಕಂಡಂತೆ ಮಾಡತಕ್ಕದ್ದು.

  (ಎ) ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡಾ ಇಪ್ಪತ್ತೈದು;

  (ಬಿ) ಸಹಕಾರಿ ಶಿಕ್ಷಣ ನಿಧಿಗೆ ಶೇಕಡಾ 3 ಇದರಲ್ಲಿ ಶೇಕಡಾ 1ರಷ್ಟು ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿಗೆ ಮತ್ತು ಬಾಕಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು ಇವರ ಶಿಕ್ಷಣ ನಿಧಿಗೆ.

  (ಡಿ) ಅನಿರೀಕ್ಷಿತ ನಷ್ಟಗಳು ಅಥವಾ ಸಾದಿಲ್ವಾರ ವೆಚ್ಚಗಳನ್ನು ಭರಿಸಲು ಕಾರ್ಯಾಚರಣಾ ಮೀಸಲು ಶೇಕಡಾ ಇಪ್ಪತ್ತು

  (ಇ) ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇಕಡಾ ಐದು

  (ಎಫ್) ನೌಕರರಿಗೆ ಸಂದಾಯ ಮಾಡಬೇಕಾದ ಎರಡು ತಿಂಗಳ ವೇತನವನ್ನು ಮೀರದ ಬೋನಸ್ಸು

  (ಜಿ) ಸದಸ್ಯರಿಗೆ ಲಾಭಾಂಶ

  ಕಲಂ 32ಎ ರನ್ವಯ ಶೇ.10ಕ್ಕೆ ಕಡಿಮೆ ಇಲ್ಲದಷ್ಟು ಮೊತ್ತವನ್ನು "ಕೊರತೆಯನ್ನು ಭರಿಸುವ ನಿಧಿ"ಗೆ ವರ್ಗಾಯಿಸತಕ್ಕದ್ದು.

  ನಿಧಿಗಳನ್ನು ಕಲಂ 18 ರ ಪ್ರಕಾರ ನ್ಯಾಸ ಅಧಿನಿಯಮ 1882 ರ 20 ನೇಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತೆಗಳಲ್ಲಿ ಅಥವಾ ಯಾವುದೇ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇಡಬಹುದು.

- **ನಮ್ಮ ಸಹಕಾರಿಯ ವ್ಯಾಪ್ತಿ 3 ಜಿಲ್ಲೆಗಳಿಗೆ ಇರುತ್ತದೆ. ವ್ಯಾಜ್ಯಗಳನ್ನು ಯಾವ ಕಛೇರಿಯಲ್ಲಿ ಹೂಡಬೇಕು. ವ್ಯಾಜ್ಯ ಹೂಡುವ ಕ್ರಮ ಹೇಗೆ ?**

  ಬೆಂಗಳೂರು, ಮೈಸೂರು, ಬೆಳಗಾವಿಯಲ್ಲಿ ಸಹಕಾರಿ ಇಲಾಖೆಯ ಪ್ರಾಂತೀಯ ನ್ಯಾಯಾಲಯವಿರುತ್ತದೆ. ಗುಲಬರ್ಗಾ ವಿಭಾಗದ ಸಹಕಾರಿ ಇಲಾಖೆಯ ಪ್ರಾಂತೀಯ ನ್ಯಾಯಾಲಯ ರಾಯಚೂರಿನಲ್ಲಿರುತ್ತದೆ ಸದರಿ ನ್ಯಾಯಾಲಯಗಳಲ್ಲಿ ಕಲಂ 39 ರನ್ವಯ ವಿವಾದವನ್ನು ಸಂಬಂಧಿಸಿದ ಪ್ರಾಂತೀಯ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಬೇಕು. ಒಂದು ವೇಳೆ ಸಹಕಾರಿಯ ಕಾರ್ಯವ್ಯಾಪ್ತಿಯು ಯಾವುದೇ ವಿಭಾಗದ ಒಳಗಡೆ ಇದ್ದಲ್ಲಿ ಸಂಬಂಧಿಸಿದ ವಿಭಾಗದಲ್ಲಿ ಹೂಡಬೇಕು.

- **ವಾಹನ ಮುಟ್ಟುಗೋಲು ಹಾಕುವ ಕ್ರಮ ಹೇಗೆ?**

  ಸಾಲ ವಸೂಲಾತಿಗಾಗಿ ಕಾಯ್ದೆ ಕಲಂ 39 ರನ್ವಯ ವ್ಯಾಜ್ಯ ದಾಖಲಿಸಿ, ಕಲಂ 41 ರನ್ವಯ ಸಂಬಂಧಿಸಿದ ನಿಬಂಧಕರ ಆದೇಶವನ್ನು ಪಡೆದು, ಸೌಹಾರ್ದ ಸಹಕಾರಿ ನಿಯಮಗಳು, 2004 ನಿಯಮ 16 ರನ್ವಯ ಆಸ್ತಿಗಳ ಜಪ್ತಿ ಕುರಿತು ವಿವರಿಸಲಾಗಿರುವ ವಿಧಾನವನ್ನು ಅನುಸರಿಸಬೇಕು.

- **ಸಹಕಾರಿ ಸಂಘಗಳ ಕಾನೂನಿನಡಿಯಲ್ಲಿ ಒಂದೆ ತರನಾದ ಎರಡು ಸಂಘಗಳಲ್ಲಿ ಸದಸ್ಯತ್ವ ಪಡೆಯಲು ಅವಕಾಶವಿರುವುದಿಲ್ಲ. ಅದೇ ರೀತಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಹೇಳಲಾಗಿದೆಯೆ?**

  ಯಾವುದೇ ರೀತಿಯ ನಿಷೇಧವಿರುವುದಿಲ್ಲ.

ಮುಂದಿನ ಸಂಚಿಕೆಗೆ...

ಶ್ರೀ ವೈ. ಕುಮಾರ
ಉಪಪ್ರಧಾನ ವ್ಯವಸ್ಥಾಪಕರು

ಸೌಹಾರ್ದ ಸಹಕಾರಿ ಕಾಯ್ದೆ ಆಶಯ

ಭಾಗ – 3

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರಲ್ಲಿ ಒಟ್ಟು 72 ಕಲಂಗಳಿದ್ದು, (**Sections**) 12 ಅಧ್ಯಾಯಗಳಿವೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಮುಖ್ಯಾಂಶಗಳನ್ನು ಮುಂದಿನ 10 ಭಾಗಗಳಲ್ಲಿ ಚರ್ಚಿಸಬಹುದಾಗಿದೆ.

1. ಪ್ರಾರಂಭ ಮತ್ತು ನೋಂದಣಿ
2. ಉಪವಿಧಿಗಳು ಮತ್ತು ಉಪವಿಧಿಗಳ ತಿದ್ದುಪಡಿ
3. ಸಹಕಾರಿಯ ಆಡಳಿತ ನಿರ್ವಹಣೆ
4. ಸದಸ್ಯರು, ಸದಸ್ಯರ ಹಕ್ಕು ಮತ್ತು ಕರ್ತವ್ಯಗಳು
5. ಸಾಮಾನ್ಯ ಸಭೆ
6. ಆಡಳಿತ ಮಂಡಳಿ ಅಧಿಕಾರ ಮತ್ತು ಪ್ರಕಾರ್ಯಗಳು
7. ಅಧ್ಯಕ್ಷರು, ಉಪಾಧ್ಯಕ್ಷರು ಅಧಿಕಾರ ಮತ್ತು ಪ್ರಕಾರ್ಯಗಳು
8. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಅಧಿಕಾರ ಮತ್ತು ಪ್ರಕಾರ್ಯಗಳು
9. ಲೆಕ್ಕಪರಿಶೋಧನೆ, ವಿವಾದಗಳ ಇತ್ಯರ್ಥ
10. ಸಂಯುಕ್ತ ಸಹಕಾರಿ, ಸಹಕಾರಿ ತತ್ವಗಳು, ಅಪರಾಧ ಮತ್ತು ದಂಡಗಳು.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 28ನೇ ಮಾರ್ಚ್ 2000ದಂದು ಗೌರವಾನ್ವಿತ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದು, 10ನೇ ಮೇ, 2000ದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಿ, 1ನೇ ಜನವರಿ, 2001 ರಿಂದ ಕರ್ನಾಟಕದಲ್ಲಿ ಜಾರಿಗೆ ತರಲಾಯಿತು.

ಅಧ್ಯಾಯ – 1 ರಲ್ಲಿ 2 ಕಲಂಗಳನ್ನು ಸೇರಿಸಿದ್ದು, ಕಲಂ1, ಈ ಕಾಯ್ದೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಎಂದು ಕರೆಯತಕ್ಕದ್ದು ಎಂದು ತಿಳಿಸುತ್ತದೆ. ಕಲಂ 2 ಈ ಅಧಿನಿಯಮಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು, ಮಂಡಳಿ, ಉಪವಿಧಿಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿ, ಮುಖ್ಯ ಪ್ರವರ್ತಕ, ಸಹಕಾರಿ, ಸಹಕಾರಿ ಬ್ಯಾಂಕ್, ಸಹಕಾರಿ ತತ್ವಗಳು, ಸಹಕಾರಿ ಸಂಘ, ಸಹಕಾರಿ ವರ್ಷ, ಕೊರತೆ, ನಿರ್ದೇಶಕ, ಸಂಯುಕ್ತ ಸಹಕಾರಿ, ಸಾಮಾನ್ಯ ಸಭೆ, ಸಾಮಾನ್ಯ ನಿಕಾಯ, ಸದಸ್ಯ, ಪಧಾಧಿಕಾರಿ, ರಿಜಿಸ್ಟ್ರಾರ್, ಮುಂತಾದವುಗಳ ಪರಿಭಾಷೆಗಳನ್ನು ವಿವರಿಸಲಾಗಿದೆ.

ಅಧ್ಯಾಯ–2 ರಲ್ಲಿ ಕಲಂ 3 ರಿಂದ ಕಲಂ 16 ರವರೆಗೆ ಒಟ್ಟು 13 ಕಲಂಗಳನ್ನು ಸೇರಿಸಲಾಗಿದೆ. ಕಲಂ 3ರರಲ್ಲಿ ಸರ್ಕಾರವು ಸರ್ಕಾರದ ಅಧಿಕಾರಿಯೊಬ್ಬನನ್ನು ರಾಜ್ಯದ ಸಹಕಾರಿಗಳ ರಿಜಿಸ್ಟ್ರಾರನನ್ನಾಗಿ ನೇಮಕ ಮಾಡಬಹುದು ಮತ್ತು ರಿಜಿಸ್ಟ್ರಾರನ ಸಹಾಯಕ್ಕೆ ಅಗತ್ಯವಾದ ಇತರೆ ಅಡಿಷನಲ್ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರನ್ನು ನೇಮಕ ಮಾಡಬಹುದಾಗಿದೆ. ಅಲ್ಲದೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಅಧಿನಿಯಮದಡಿ ರಿಜಿಸ್ಟ್ರಾರನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಸಹಕಾರಿಗಳ ಅಡಿಷನಲ್ ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಪ್ರದಾತ್ತಗೊಳಿಸಬಹುದಾಗಿದೆ.

ಕಲಂ 4ರಲ್ಲಿ ನೊಂದಣಿ ಮಾಡಬಹುದಾದ ಸಹಕಾರಿಗಳ ಬಗ್ಗೆ ವಿವರಿಸಲಾಗಿದೆ. ಸಹಕಾರಿಯನ್ನು ನೊಂದಾಯಿಸಲು, ಸಹಕಾರ ಸಂಘವೊಂದು ಸಹಕಾರಿಯಾಗಿ ಪರಿವರ್ತನೆ ಹೊಂದಲು, ಸೌಹಾರ್ದ ಸಹಕಾರಿ ಕಾಯ್ದೆಯಡಿ ನೊಂದಾಯಿತವಾದ 5 ಅಥವಾ ಅದಕ್ಕೂ ಹೆಚ್ಚು ಸಹಕಾರಿಗಳು ಒಂದು ಒಕ್ಕೂಟ ಸಹಕಾರಿಯಾಗಿ ನೊಂದಾಯಿತವಾಗಲು ಅವಕಾಶ ಮಾಡಿ ಕೊಡಲಾಗಿದೆ. ಕಲಂ 5 ರಲ್ಲಿ ಸಹಕಾರಿ ನೊಂದಣಿಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ವಿವರಿಸಲಾಗಿದೆ.

ಒಂದು ಸಹಕಾರಿಯು ನೊಂದಾಯಿತವಾಗಿರುವ ಅಥವಾ ನೊಂದಾಯಿತವಾಗಿದೆಯೆಂದು ಬಾವಿಸಿದಲ್ಲಿ, ಸಂಬಂಧಿಸಿದ ರಿಜಿಸ್ಟ್ರಾರನು, ವಿದ್ಯುಕ್ತವಾಗಿ ರುಜುಮಾಡಿ, ಮೊಹರು ಹಾಕಿ ನೀಡಿದ ಪ್ರಮಾಣ ಪತ್ರವು ಈ ಅಧಿನಿಯಮದಡಿ ನೊಂದಾಯಿಸಲಾದ ಸಹಕಾರಿ ಎಂಬುದಕ್ಕೆ ನಿರ್ಣಯಕ ಸಾಕ್ಷ್ಯವಾಗಿರುತ್ತದೆ.

ಕಾಯ್ದೆ ಕಲಂ 9 ರಂತೆ, ಪ್ರತಿಯೊಂದು ಸಹಕಾರಿಯು, ಅದರ ಪೂರ್ಣ ಹೆಸರನ್ನು ಮತ್ತು ಈ ಅಧಿನಿಮದಡಿ ನೀಡಲಾದ ನೊಂದಣಿ ಪ್ರಮಾಣ ಪತ್ರವನ್ನು ಅದು ವ್ಯವಹಾರ ನಡೆಸುವ ನೊಂದಾಯಿತ ಕಛೇರಿ ಅಥವಾ ಸ್ಥಳದಲ್ಲಿ ಪ್ರದರ್ಶಿಸಬೇಕು.

ಸಹಕಾರಿಯು ತನ್ನ ಎಲ್ಲಾ ಸೂಚನಾ ಪತ್ರಗಳಲ್ಲಿ, ಇತರ ಅಧಿಕೃತ ಪ್ರಕಟಣೆಗಳಲ್ಲಿ, ಪತ್ರ ವ್ಯವಹಾರಗಳಲ್ಲಿ, ಅದರ ಎಲ್ಲಾ ಕರಾರುಗಳಲ್ಲಿ, ವ್ಯವಹಾರ ಪತ್ರಗಳಲ್ಲಿ, ಸರಕು ಬೇಡಿಕೆ ಪತ್ರಗಳಲ್ಲಿ, ಲೆಕ್ಕಪತ್ರಗಳಲ್ಲಿ, ಪ್ರಾಮಿಸರಿ ನೋಟುಗಳಲ್ಲಿ, ಹುಂಬರಗಳಲ್ಲಿ, ಧನಾದೇಶಗಳಲ್ಲಿ, ಅದು ಹಣಕ್ಕಾಗಿ ಸಹಿ ಮಾಡುವ ಅಥವಾ ಅದರ ಪರವಾಗಿ ಸಹಿ ಮಾಡುವ ಚೆಕ್ಕುಗಳಲ್ಲಿ, ಸಹಕಾರಿಯ ಮೊಹರಿನಲ್ಲಿ, ಈಗ ಸಹಕಾರಿಯು ನಡೆಸುವ ಎಲ್ಲಾ ರೀತಿಯ ವ್ಯವಹಾರಗಳಲ್ಲಿ, ಸಹಕಾರಿಯ ನೊಂದಣಿ ಸಂಖ್ಯೆ, ಹೆಸರು ಮತ್ತು ನೊಂದಾಯಿತ ಕಛೇರಿಯ ವಿಳಾಸವನ್ನು ಸೂಚಿಸತಕ್ಕದ್ದು.

ಸೌಹಾರ್ದ ಸಹಕಾರಿಗಳ
ಶಾಸನಬದ್ಧ ಲೆಕ್ಕಪರಿಶೋಧನೆ

ಎಸ್. ಜಿ. ಟೋಪಣ್ಣವರ
ವಿಭಾಗೀಯ ಅಧಿಕಾರಿ, ಬೆಳಗಾವಿ.

"ಲೆಕ್ಕಪರಿಶೋಧನೆ ಮಾಡಿಸುವುದು ಕೇವಲ ನಿರ್ದೇಶಕ ಮಂಡಳಿ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಬಾರದು"

...ಹಿಂದಿನ ಸಂಚಿಕೆಯಿಂದ

ಲೆಕ್ಕಪರಿಶೋಧಕರ ನೇಮಕಾತಿ ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು :

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು (ಇನ್ನೂ ಮುಂದೆ ಸಂಯುಕ್ತ ಸಹಕಾರಿ ಎಂದು ಸಂಭೋದಿಸಲಾಗುವುದು) ಇವರು ಕರ್ನಾಟಕ ಸೌಹಾರ್ದ ಸಹಕಾರಿ ಕಾನೂನು 1997 (ಇನ್ನೂ ಮುಂದೆ ಕಾನೂನು ಎಂದು ಸಂಭೋದಿಸಲಾಗುವುದು) ರ ಕಲಂ 53 (7) (ಟ) ರ ಅಡಿ ತಮಗೆ ಇರುವ ಶಾಸನಬದ್ಧ ಅಧಿಕಾರದ ಮೇರೆಗೆ ತಯಾರಿಸಿದ ಆಡಿಟರರ ಮತ್ತು ಚಾರ್ಟರ್ಡ ಅಕೌಂಟಂಟರ ಯಾದಿಯಲ್ಲಿ (ಖಣ ಥಜ ಇಟಿಥಿಚಿಟಿಜಟಟಜಟಿಣ ಥಜ ಔಣಜುಣಿಥಿ ಚಿಟಿಜ ಆಚಿಡಿಣಿಜಡಿಜಜ ಂಥಿಥಿಂಣಿಟಿಣಿಚಿಟಿಣ) ಹೆಸರು ಹೊಂದಿದವರ ಪೈಕಿ ಲೆಕ್ಕಪರಿಶೋಧಕರನ್ನು ಪ್ರತಿವರ್ಷ ಜರುಗುವ ಸಾಮಾನ್ಯ ಸಭೆಯಲ್ಲಿ ಸಹಕಾರಿ ವರ್ಷದ ಲೆಕ್ಕಪರಿಶೋಧನೆಗೆ ನೇಮಿಸಿಕೊಳ್ಳಬೇಕಾಗುತ್ತದೆ. ಕಾನೂನು ಕಲಂ 33 (4) ರ ಪ್ರಕಾರ ಸಹಕಾರಿಯ ನಿರ್ದೇಶಕ ಮಂಡಳಿಯು ಅವರ ಸಂಭಾವನೆಯನ್ನು ಗೊತ್ತುಪಡಿಸಬೇಕು. ಯಾವುದೇ ಕಾರಣಕ್ಕೆ ಸಾಮಾನ್ಯ ಸಭೆಯು ತನಗಿದ್ದ ಲೆಕ್ಕಪರಿಶೋಧಕರ ನೇಮಕಾತಿ ಅಧಿಕಾರವನ್ನು ನಿರ್ದೇಶಕ ಮಂಡಳಿಗೆ ವಹಿಸಲು ಬರುವುದಿಲ್ಲ. ಸಹಕಾರಿಯು ನಂತರ 15 ದಿವಸಗಳಲ್ಲಿ ಲೆಕ್ಕಪರಿಶೋಧಕರಿಗೆ ಅವರ ನೇಮಕಾತಿ ಬಗ್ಗೆ ಹಾಗೂ ಅವರಿಗೆ ಸದರಿ ಕೆಲಸಕ್ಕಾಗಿ ನಿಗದಿಪಡಿಸಿದ ಸಂಭಾವನೆ ಗೊತ್ತುಪಡಿಸಲು ತಿಳುವಳಿಕೆ ಪತ್ರವನ್ನು ಕಳುಹಿಸಬೇಕು.

ಯಾವುದೇ ಕಾಲಕ್ಕೂ ಹಾಗೂ ಯಾವುದೇ ಕಾರಣಕ್ಕೂ ಸಹಕಾರಿಯು ತನ್ನ ಲೆಕ್ಕಪರಿಶೋಧನೆಗಾಗಿ ಸಂಯುಕ್ತ ಸಹಕಾರಿಯು ಪ್ರಕಟಿಸಿದ ಲೆಕ್ಕಪರಿಶೋಧಕರ ಯಾದಿಯಲ್ಲಿ ಹೆಸರಿಲ್ಲದ ಲೆಕ್ಕಪರಿಶೋಧಕರನ್ನು ನೇಮಿಸತಕ್ಕದ್ದಲ್ಲ. ಹಾಗೆ ನೇಮಿಸಿ ಲೆಕ್ಕಪರಿಶೋಧನೆ ಮಾಡಿಕೊಂಡಲ್ಲಿ ಅಂತಹ ಲೆಕ್ಕಪರಿಶೋಧನಾ ವರದಿಯು ಅಸಿಂಧು ಎಂದು ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ಪರಿಗಣಿಸಲಾಗುತ್ತದೆ. ಅಂತಹ ಪ್ರಸಂಗದಲ್ಲಿ ಸಹಕಾರಿಯು ಸಂಯುಕ್ತ ಸಹಕಾರಿಯು ಪ್ರಕಟಿಸಿದ ಪಟ್ಟಿಯಲ್ಲಿಯ ಹೆಸರುಳ್ಳ ಅಧಿಕೃತವಾದ ಲೆಕ್ಕಪರಿಶೋಧಕರಿಂದ ದುಬಾರಿ ಫೀ ಕೊಟ್ಟು ಲೆಕ್ಕಪರಿಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಸಹಕಾರಿಯು ಹಾಗೆ ಮಾಡದಿದ್ದಲ್ಲಿ ಸದರಿ ಸಂಸ್ಥೆಯ ಲೆಕ್ಕಪರಿಶೋಧನೆ ಆಗಿಲ್ಲವೆಂದು ಪರಿಗಣಿಸಿ ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 33 (7) ರ ಅನ್ವಯ ತನಗಿರುವ ಜವಾಬ್ದಾರಿಯ ನಿರ್ವಹಣೆಗೆ ತಾನೇ ಒಬ್ಬ ಲೆಕ್ಕಪರಿಶೋಧಕರನ್ನು ಕೆಲಸಕ್ಕಾಗಿ ನೇಮಿಸಿ ಸಹಕಾರಿಗೆ ತಿಳಿಸುತ್ತದೆ. ಆಗ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ಫೀಯನ್ನು ಹಾಗೇ ನೇಮಿಸಿದ ಲೆಕ್ಕಪರಿಶೋಧಕರಿಗೆ ಕೊಟ್ಟು ತಮ್ಮ ಸಂಸ್ಥೆಯ ಲೆಕ್ಕಪರಿಶೋಧನೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

ಲೆಕ್ಕಪರಿಶೋಧನೆಯ ಕೆಲಸ ಪ್ರಾರಂಭ ಹಾಗೂ ಲೆಕ್ಕಪರಿಶೋಧಕರಿಗೆ ಮಾಹಿತಿ ಪೂರೈಕೆ ಬಗ್ಗೆ:

ಕಾನೂನು ಕಲಂ 33 (3) ರ ಪ್ರಕಾರ ಸಹಕಾರಿಯ ನಿರ್ದೇಶಕ ಮಂಡಳಿಯು ಸಹಕಾರಿ ವರ್ಷ ಮುಕ್ತಾಯಗೊಂಡ 60 ದಿವಸದೊಳಗಾಗಿ ಎಲ್ಲ ವಾರ್ಷಿಕ ಆರ್ಥಿಕ ತಕ್ತೆಗಳನ್ನು ಲೆಕ್ಕಪರಿಶೋಧನೆಗೆ ತಯಾರಿಸಬೇಕು. ತಮ್ಮ ಸಂಸ್ಥೆಯ ಲೆಕ್ಕತಪಾಸಣೆಯು ತಮ್ಮ ಉಪನಿಬಂಧನೆಯಲ್ಲಿ ನಮೂದಿಸಲ್ಪಟ್ಟ ಅವಧಿಯೊಳಗೆ ಪೂರ್ತಿಗೊಳ್ಳಬೇಕು. ಆದರೆ ಯಾವುದೇ ಪರಿಸ್ಥಿತಿಯಲ್ಲಿ ಲೆಕ್ಕಪರಿಶೋಧಕರು ಸಹಕಾರಿಯ ತಮ್ಮ ಲೆಕ್ಕಪರಿಶೋಧನೆಯನ್ನು ಪೂರ್ತಿಗೊಳಿಸಿ ವರದಿಯನ್ನು 31 ಅಗಸ್ಟರೊಳಗೆ ಸಂಯುಕ್ತ ಸಹಕಾತಿಗೆ ಮುಟ್ಟುವ ಹಾಗೆ ಕಳುಹಿಸಬೇಕಾಗುವುದು ಎಂಬ ಈ ವಿಷಯವನ್ನು ಸಹಕಾರಿಯು ಗಮನದಲ್ಲಿಟ್ಟುಕೊಂಡು ತಮ್ಮ ಸಂಸ್ಥೆಯ ಲೆಕ್ಕಪರಿಶೋಧನೆ ಪೂರ್ಣಗೊಳಿಸುವ ಕಾರ್ಯವನ್ನು ನಿರೂಪಿಸಿಕೊಳ್ಳಬೇಕು. ಸಂಯುಕ್ತ ಸಹಕಾರಿಯು ಲೆಕ್ಕಪರಿಶೋಧಕರಿಗೆ ಸಹಕಾರಿಗಳ ಲೆಕ್ಕ ತಪಾಸಣೆ ವಿಷಯದಲ್ಲಿ ಕಾಯ್ದೆ ಕಲಂ 53 (7) (ಅ) ರ ಮೇರೆ ಮಾರ್ಗದರ್ಶನಗಳನ್ನು ಹೊರಡಿಸಿದ್ದು ಸದರಿ ಮಾರ್ಗದರ್ಶಿಗಳ ಪ್ರಕಾರ ಲೆಕ್ಕಪರಿಶೋಧಕರು ತಮ್ಮ ಲೆಕ್ಕಪರಿಶೋಧನೆ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.

ಲೆಕ್ಕಪರಿಶೋಧಕರಿಗೆ ಸಂಯುಕ್ತ ಸಹಕಾರಿಯು ತನ್ನ ಮಾರ್ಗದರ್ಶಗಳ ಮೂಲಕ ಕೆಲವು ಮಹತ್ತರ ಕರ್ತವ್ಯಗಳನ್ನು ಗೊತ್ತುಪಡಿಸಿದ್ದು ಹಾಗೂ ಅವರಿಗೆ ಕೆಲವೊಂದು ಅಧಿಕಾರಗಳನ್ನು ಕೊಟ್ಟಿರುತ್ತಾರೆ. ಕಾನೂನು ಕಲಂ 33 (5) ರ ಪ್ರಕಾರ ಸಹಕಾರಿಯ ಲೆಕ್ಕಪರಿಶೋಧನೆಯನ್ನು ಕೈಕೊಂಡ ಲೆಕ್ಕಪರಿಶೋಧಕರಿಗೆ ಸಹಕಾರಿಯು ತಾನು ಜರುಗಿಸುವ ವಾರ್ಷಿಕ ಸರ್ವ ಸಾಧಾರಣ ಸಭೆಯ ನೋಟಿಸನ್ನು ಕಳುಹಿಸಬೇಕಾಗುತ್ತದೆ. ಸದರಿ ಲೆಕ್ಕಪರಿಶೋಧಕರು ಅಂತಹ ಸಭೆಗೆ ಹಾಜರಾಗಿ ಲೆಕ್ಕಪರಿಶೋಧನಾ ವರದಿಯ ಯಾವುದೇ ವಿಷಯದ ಮೇಲೆ ಅವಶ್ಯಕತೆ ಬಿದ್ದರೆ ಸ್ಪಷ್ಟಿಕರಣ ಕೊಡಬೇಕಾಗುತ್ತದೆ. ಸಹಕಾರಿಯು ತನ್ನ ಸಾಮಾನ್ಯ ಸಭೆಗೆ ಹಾಜರಾದ ಲೆಕ್ಕಪರಿಶೋಧಕರ ಹಾಜರಾತಿಯನ್ನು ದಾಖಲು ಮಾಡಿಕೊಂಡು ಅವರಿಗೆ ರುಜು ಪತ್ರಗಳನ್ನು ಕೊಡಬೇಕಾಗುತ್ತದೆ. ಲೆಕ್ಕಪರಿಶೋಧಕರು ತಮ್ಮ ಲೆಕ್ಕಪರಿಶೋಧನೆಗಳು ಮಾಡುವಾಗ ಅನುಸರಿಸಬೇಕಾದ ವಿಧಾನಗಳು ಹಾಗೂ ಪಡೆಯಬೇಕಾದ ಮಾಹಿತಿಗಳ ಬಗ್ಗೆ ವಿವರಗಳನ್ನು ಓದಿ ಅಭ್ಯಯಿಸಬೇಕಾದ ವಿಷಯಗಳ ಬಗ್ಗೆ ವಿವರಗಳನ್ನು ಕಾನೂನಿನಲ್ಲಿ ಮತ್ತು ಸಂಯುಕ್ತ ಸಹಕಾರಿಯು ಲೆಕ್ಕಪರಿಶೋಧಕರಿಗೆ ಕೊಡಲ್ಪಟ್ಟ ಮಾರ್ಗದರ್ಶನಗಳಲ್ಲಿ ನಮೂದಿಸಲಾಗಿದೆ.

ಲೆಕ್ಕಪರಿಶೋಧಕರು ತಮ್ಮ ಮೇಲಿರುವ ಜವಾಬ್ದಾರಿಗಳನ್ನು ಬಹಳ ಸೂಕ್ಷ್ಮವಾಗಿ ನಿರ್ವಹಣೆ ಮಾಡಲು ಕಾನೂನಿನಲ್ಲಿಯ ನಿಬಂಧನೆಗಳು, ಮಾರ್ಗದರ್ಶನದಲ್ಲಿಯ ನಿಬಂಧನೆಗಳು ಅಲ್ಲದೇ ಸರ್ವಸಾಮಾನ್ಯವಾಗಿ ತಮ್ಮ ಮೇಲೆ ಇತರ ಸಂಬಂಧಿಸಿದ ಕಾನೂನು ಹಾಗೂ ನಿಬಂಧನೆಗಳ ಪ್ರಕಾರ ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಂಯುಕ್ತ ಸಹಕಾರಿಯು ಲೆಕ್ಕಪರಿಶೋಧನೆಗಾಗಿ ತಾನು ಹೊರಡಿಸಿದ ಮಾರ್ಗಸೂಚಿಗಳನ್ವಯ ಲೆಕ್ಕಪರಿಶೋಧನೆ ಮುಗಿದ ನಂತರ ಅವರು ಕೊಡುವ ವರದಿಗಾಗಿ ನಮೂನೆಯನ್ನು ನಿಗದಿಪಡಿಸಿರುತ್ತದೆ. ಅಲ್ಲದೇ ಸಂಯುಕ್ತ ಸಹಕಾರಿಯು



ಲೆಕ್ಕಪರಿಶೋಧಕರಿಗೆ ಸಂಯುಕ್ತ ಸಹಕಾರಿಯು ತನ್ನ ಮಾರ್ಗದರ್ಶಗಳ ಮೂಲಕ ಕೆಲವು ಮಹತ್ತರ ಕರ್ತವ್ಯಗಳನ್ನು ಗೊತ್ತುಪಡಿಸಿದ್ದು ಹಾಗೂ ಅವರಿಗೆ ಕೆಲವೊಂದು ಅಧಿಕಾರಗಳನ್ನು ಕೊಟ್ಟಿರುತ್ತಾರೆ.

ಎಲ್ಲ ಸಹಕಾರಿಗಳಿಗೆ ಅವರು ಕೊಡುವ ಆರ್ಥಿಕ ತಕ್ತೆಗಳು ಅಂದರೆ ವರದಿ ವರ್ಷದ ಲಾಭ ಹಾನಿ ಖಾತೆ ಹಾಗೂ ಆಢಾವೆ ಪತ್ರಿಕೆಗಳನ್ನು ಅವುಗಳ ಹಿಂದಿನ ವರ್ಷದ ತುಲನಾತ್ಮಕ ಆರ್ಥಿಕ ಸ್ಥಿತಿಗಳ ಅಂಕಿ ಸಂಖ್ಯೆಗಳೊಂದಿಗೆ ತಯಾರಿಸಲು ಸೂಚಿಸಲಾಗಿದ್ದು ಈ ಪದ್ಧತಿಯಲ್ಲಿ ಎಲ್ಲ ಸಹಕಾರಿಗಳು ಆರ್ಥಿಕ ತಕ್ತೆಗಳನ್ನು ಸಹಕಾರಿ ವರ್ಷ ಮುಗಿದ 60 ದಿವಸಗಳಲ್ಲಿ ತಯಾರಿಸಿ ಇತರ ಎಲ್ಲ ಮಾಹಿತಿಗಳೊಂದಿಗೆ ಲೆಕ್ಕಪರಿಶೋಧಕರಿಗೆ ಸಲ್ಲಿಸಬೇಕು.

ಲೆಕ್ಕಪರಿಶೋಧಕರು ಸಂಯುಕ್ತ ಸಹಕಾರಿಗೆ ಲೆಕ್ಕಪರಿಶೋಧನಾ ವರದಿಗಳನ್ನು ನಿಗದಿಪಡಿಸಿದ ನಮೂನೆಯಲ್ಲಿ ಕೊಡಲು ಅನೂಕೂಲವಾಗುವಂತೆ ಅದಕ್ಕೆ ಬೇಕಾದ ಎಲ್ಲ ಮಾಹಿತಿಗಳನ್ನು, ಅಂಕಿಸಂಖ್ಯೆಗಳನ್ನು, ತಕ್ತೆಗಳನ್ನು, ಕಾಗದಪತ್ರಗಳನ್ನು ಸಹಕಾರಿಯು ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನಾ ವೇಳೆಗೆ ಸರಿಯಾಗಿ ಸಮರ್ಪಕವಾಗಿ ಅವರ ಪದ್ಧತಿಯಲ್ಲಿ ತಯಾರಿಸಿ ಅವರಿಗೆ ತಿಳಿಯುವ ಹಾಗೆ ವಿವರಗಳೊಂದಿಗೆ ಸಲ್ಲಿಸಬೇಕು. ಸಹಕಾರಿಯು ತನ್ನ ಲಾಭವನ್ನು/ಹಾನಿಯನ್ನು ತಿಳಿದುಕೊಳ್ಳುವ ಮುಂಚೆ ತಾನು ತನ್ನ ವ್ಯವಹಾರದಲ್ಲಿ 31 ಮಾರ್ಚದೊಳಗೆ ಠೇವುಗಳ ಮೇಲೆ ಕೊಡತಕ್ಕ ಎಲ್ಲ ಬಡ್ಡಿಗಳನ್ನು, ಇತರ ಎಲ್ಲ ಬಾಕಿಗಳನ್ನು ಪಾವತಿ ಮಾಡಿರಬೇಕು. ಕ್ರೆಡಿಟ ಸೌಹಾರ್ದ ಸಹಕಾರಿಗಳು ಹಾಗೂ ಕ್ರೆಡಿಟ ವ್ಯವಹಾರ ಮಾಡುವಂತಹ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಗಳು ಕ್ಯಾಶ ಸರ್ಟಿಫೀಕೆಟ, ಠೇವು ರಿಇನ್ವೆಸ್ಟಮೆಂಟ ಯೋಜನೆ ದಾಮದುಪ್ಪಟ ಅಂತಹ ಠೇವು ಖಾತೆಗಳಲ್ಲಿಯೇ ಬಡ್ಡಿ ಶೇಖರಿಸುವ ಯೋಜನೆಗಳ ಮುಖಾಂತರ ಠೇವುಗಳನ್ನು ಸ್ವೀಕರಿಸಿದ್ದಲ್ಲಿ ಅಂತಹ ಠೇವುಗಳ ಮೇಲೆ, ಉಳಿತಾಯ ಖಾತೆಗಳ ಮೇಲೆ ಆಗುವ ಬಡ್ಡಿಗಳನ್ನು ಆಯಾ ಖಾತೆಗಳಿಗೆ 31 ಮಾರ್ಚದೊಳಗಾಗಿ ಜಮೆ ಮಾಡಿರಬೇಕು. ಯಾವ ಖಾತೆಯಲ್ಲಿ ಬಡ್ಡಿಯನ್ನು ಜಮೆ ಮಾಡುವುದಿಲ್ಲವೋ ಅಂತಹ ಖಾತೆ ಮೇಲಿನ ಬಡ್ಡಿಗಳನ್ನು ಕೊಡತಕ್ಕ ಬಡ್ಡಿ ಎಂದು ಪರಿಗಣಿಸಿ ಅಂತಹ ಕೊಡತಕ್ಕ ಬಡ್ಡಿ ರಕ್ಕಮುಗಳನ್ನು ಬಡ್ಡಿ ಖಾತೆಗೆ ಖರ್ಚು ಹಾಕಿ ಠೇವುಗಳ ಮೇಲೆ ಕೊಡತಕ್ಕ ಬಡ್ಡಿ ಎಂದು ಶಿರ್ಷಿಕೆಯಲ್ಲಿ ತೆಗೆದಿರಿಸಬೇಕು. ಆಸ್ತಿಗಳ ಮೇಲೆ ಸವಕಳಿಯನ್ನು ನಿಯಮಗಳ ಪ್ರಕಾರ ತೆಗೆದಿರಿಸಬೇಕು. ಪ್ರತ್ಯಕ್ಷವಾಗಿ ನಗದು ರೂಪದಲ್ಲಿ ಅಥವಾ ಚೆಕ್ ರೂಪದಲ್ಲಿ ಸಾಲ ಖಾತೆಗಳ ಮೇಲೆ ಜಮೆಯಾದ ಬಡ್ಡಿಗಳನ್ನು ಮಾತ್ರ ಜಮೆಯಾದ ಬಡ್ಡಿಯನ್ನು ಆದಾಯ ರಕ್ಕಮೆಂದು ಪರಿಗಣಿಸಬೇಕು. ಇನ್ನೂ ಕಾನೂನು ಪ್ರಕಾರ ಕೊಡತಕ್ಕ ಎಲ್ಲ ಕರಗಳನ್ನು ಫೀಗಳನ್ನು ಅಲ್ಲದೇ ಲೆಕ್ಕಪರಿಶೋಧನೆ ಫೀ ಮುಂತಾದವುಗಳನ್ನು ತೆಗೆದಿರಿಸಿ ನಿವ್ವಳ ಲಾಭ/ನಷ್ಟಗಳನ್ನು ಕಂಡು ಹಿಡಿಯಬೇಕು. ಯಾವುದೇ ಕಾರಣಕ್ಕೆ ಸಾಲಗಳ ಮೇಲೆ ಬರತಕ್ಕ ಬಡ್ಡಿಯನ್ನು ಲಾಭಕ್ಕೆ ಜಮೆ ಹಿಡಿಯಬಾರದು. ಸಹಕಾರಿಗಳು ತಮ್ಮ ವಾರ್ಷಿಕ ಆರ್ಥಿಕ ತಕ್ತೆಗಳನ್ನು ಪೂರ್ತಿಗೊಳಿಸುವುದಕ್ಕಿಂತ ಮುಂಚೆ ಅವಶ್ಯವೆನಿಸಿದಲ್ಲಿ ಸಂಬಂಧಪಟ್ಟ ಲೆಕ್ಕಪರಿಶೋಧಕರನ್ನು ಸಂಪರ್ಕಿಸಿ ಅವರ ಸಲಹೆ ಸೂಚನೆಗಳನ್ನು ಪಡೆಯಬೇಕು. ಹೀಗೆ ಎಲ್ಲ ದೃಷ್ಠಿಯಿಂದ ಪರಿಪೂರ್ಣವಾಗಿ ತಯಾರುಗೊಂಡ ಆರ್ಥಿಕ ತಕ್ತೆಯನ್ನು ಲೆಕ್ಕಪರಿಶೋಧಕರಿಗೆ ಹಾಜರು ಪಡಿಸಬೇಕು.

ಲೆಕ್ಕಪರಿಶೋಧಕರಿಗೆ ಮಾಹಿತಿ ಪೂರೈಕೆಯಲ್ಲಿ ಆಗುತ್ತಿರುವ ಲೋಪದೋಷಗಳು ಹಾಗೂ ಅವುಗಳಿಂದ ಸಂಸ್ಥೆಯ ಮೇಲೆ ಆಗುವ ಪರಿಣಾಮಗಳು

ಲೆಕ್ಕಪರಿಶೋಧಕರಿಗೆ ಮಾಹಿತಿ ಪೂರೈಸುವ ವಿಷಯದಲ್ಲಿ ಸಹಕಾರಿಯು ಪಾರದರ್ಶಿಯಾಗಿರಬೇಕು. ಲೆಕ್ಕಪರಿಶೋಧಕರು ಮಿತ್ರ, ತತ್ವಜ್ಞಾನಿ ಹಾಗೂ ಮಾಗದರ್ಶಕ (ಈಡಿಜಟಜ, ಘುಟಥಅಖಿಜಡ ಚಟಜ ಉಣುಜಜ) ಆಗಿರುತ್ತಾ-ರೆ. ಅವರು ಸಂಸ್ಥೆಯಿಂದ ನೇಮಕಾತಿಗೊಳ್ಳುತ್ತಿದ್ದು ಅವರ ಸಂಭಾವನೆಯನ್ನು ನಿರ್ದೇಶಕ ಮಂಡಳಿಯು ನಿರ್ಧರಿಸುತ್ತದೆ. ಅವರು ಯಾವಾಗಲೂ ಸಂಸ್ಥೆಯ ಹಿತವನ್ನು ಬಯಸುವವರು ಹಾಗೂ ಒಳ್ಳೆಯ ಮಾರ್ಗದರ್ಶಕರು ಆಗಿದ್ದು ತಮ್ಮವರೇ ಆಗಿರುತ್ತಾ-ರೆ. ಸಂಸ್ಥೆಯು ತನ್ನ ಚಾಲನೆಯಲ್ಲಿ ಕಾನೂನು ಪರಿಜ್ಞಾನವಿಲ್ಲದೇ, ಉಪನಿಬಂಧನೆಗಳ ಪೂರ್ತಿ ಅಭ್ಯಾಸವಿಲ್ಲದೇ ಕೆಲವು ತಪ್ಪುಗಳನ್ನು ಆಡಳಿತದಲ್ಲಿ ಹಾಗೂ ಸಾಲ ಮಂಜೂರಿಯಲ್ಲಿ ಮಾಡಿರಬಹುದು. ಅವು ನಂತರ ಸಹಕಾರಿಯ ಆಡಳಿತ ಮಂಡಳಿಗೆ ಮತ್ತು ವ್ಯವಸ್ಥಾಪಕರರಿಗೆ ಗೊತ್ತಾಗಿರಬಹುದು. ಇಂತಹ ಯಾವುದೇ ತಪ್ಪುಗಳನ್ನು ಹಾಗೂ ಇನ್ಯಾವುದೇ ತರಹದ ತಪ್ಪುಗಳನ್ನು ಸಹಕಾರಿಯು ಎಸಗಿದ್ದರೆ ಅವುಗಳನ್ನು ಯಾವುದೇ ಸಂಕೋಚವಿಲ್ಲದೇ ಲೆಕ್ಕಪರಿಶೋಧಕರ ಮುಂದೆ ಬಿಚ್ಚಿಡಬೇಕು. ಅವರು ಅದರ ಬಗ್ಗೆ ಅಭ್ಯಯಿಸಿ ಅಂತಹ ತಪ್ಪುಗಳನ್ನು ಮಾಡದಂತೆ ತಮಗೆ ಸಲಹೆಗಳನ್ನು, ಮಾರ್ಗದರ್ಶನಗಳನ್ನು ಕೊಡುತ್ತಾರೆ. ತಪ್ಪುಗಳು ಆಗದ ಹಾಗೆ ಎಚ್ಚರಿಕೆಯ ವಿಧಾನಗಳನ್ನು, ಅದರ ಬಗ್ಗೆ ಅರಿವು ಮತ್ತು ಜಾಗೃತೆಯನ್ನು ತಮ್ಮಲ್ಲಿ ಮೂಡಿಸುತ್ತಾರೆ. ಅಂತಹ ತಪ್ಪುಗಳಿಂದ ಸಂಸ್ಥೆಗೆ ಹಾಗೂ ಪದಾಧಿಕಾರಿಗೆ, ನೌಕರರಿಗೆ ಆಗುವ ತೊಂದರೆ, ನಷ್ಟ ಹಾಗೂ ಅಂತಹವುಗಳಿಂದ ಸಂಸ್ಥೆಯ ಬೆಳವಣಿಗೆಯ ಮೇಲೆ ಆಗುವ ಪರಿಣಾಮಗಳ ಬಗ್ಗೆ ಪೂರ್ತಿ ಮಾಹಿತಿಯನ್ನು ಎಚ್ಚರಿಕೆಯನ್ನು ಸಹಕಾರಿಯ ಆಡಳಿತ ಮಂಡಳಿಗೆ, ನೌಕರರಿಗೆ ಹಾಗೂ ಸಂಬಂಧಪಟ್ಟ ತಪ್ಪಿತಸ್ಥರರಿಗೆ ಕೊಡುತ್ತಾರೆ. ಲೆಕ್ಕಪರಿಶೋಧಕರು ಹಲವಾರು ಸಂಸ್ಥೆಗಳ ಲೆಕ್ಕಪರಿಶೋಧನೆ ಮಾಡಿ ಕಾನೂನು ಮತ್ತು ಪರಿಪತ್ರಗಳನ್ನು ಓದಿ ಅವೆಲ್ಲವುಗಳಲ್ಲಿ ಪರಿಣಿತರಾಗಿರುವುದರಿಂದ ಅವರಿಂದ ಸಹಕಾರಿಯು ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿ ತನ್ನ ಕಾರ್ಯಪದ್ಧತಿಯನ್ನು ಚೆನ್ನಾಗಿ ರೂಪಿಸಿಕೊಳ್ಳಬಹುದು. ಚಾಣಾಕ್ಷ ಇರುವ ನಿರ್ದೇಶಕ ಮಂಡಳಿ ಹಾಗೂ ನೌಕರರು ಅವರಿಂದ ಸಾಕಷ್ಟು ಮಾಹಿತಿಯ ಲಾಭವನ್ನು ಬಹಳ ಸುಂದರವಾಗಿ ಹಾಗೂ ಚೆನ್ನಾಗಿ ಪಡೆದು ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಒಯ್ಯುವುದರಲ್ಲಿ ಸಂದೇಹವಿಲ್ಲ.

ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನೆ ಮಾಡುವ ಹಾಗೂ ವರದಿಗಳನ್ನು ಕೊಡುವ ತಮ್ಮದೇ ಆದ ಜವಾಬ್ದಾರಿಗಳಿದ್ದು ಅವುಗಳ ನಿರ್ವಹಣೆಗೆ ನಿರ್ದೇಶಕ ಮಂಡಳಿಯಿಂದ (ಈಗಿನ ಹಾಗೂ ಹಿಂದಿನ), ನೌಕರರಿಂದ (ಈಗಿನ ಹಾಗೂ ಹಿಂದಿನ) ಹಲವಾರು ಮಾಹಿತಿಗಳನ್ನು ಸ್ಪಷ್ಟಿಕರಣಗಳನ್ನು ವಿವರಣೆಗಳನ್ನು ಕೇಳುವ ಅಧಿಕಾರ ಅವರು ಹೊಂದಿದ್ದು ಅದಲ್ಲದೇ ಅವರು ಹಲವಾರು ಕಾಗದಪತ್ರಗಳನ್ನು ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲು ಹೇಳುವರು. ಅವೆಲ್ಲವುಗಳನ್ನು ಹಾಗೂ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲ ಜಮಾ ಖರ್ಚು ಪಾವತಿಗಳು, ಪುಸ್ತಕಗಳು, ಲೆಜರಗಳು, ಬಾಂಡ್‌ಗಳು, ಕರಾರು ಪತ್ರಗಳು ಇವೆಲ್ಲವುಗಳನ್ನು ಸಹ ಲೆಕ್ಕಪರಿಶೋಧನಾ ವೇಳೆಯಲ್ಲಿ ಕೇಳುವರು. ಅವೆಲ್ಲವುಗಳನ್ನು ಸರಿಯಾದ ವೇಳೆಗೆ ಸರಿಯಾಗಿ ಅವರು ಬೇಡಿದ ಹಾಗೇ ಸಹಕಾರಿಯು ಹಾಜರು ಪಡಿಸಬೇಕಾಗುತ್ತದೆ. ಲೆಕ್ಕಪರಿಶೋಧಕರು ಅವೆಲ್ಲವುಗಳನ್ನು ಪರಿಶೀಲಿಸಿ ಅಭ್ಯಸಿಸಿ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ನಮೂನೆಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಕೊಡಬೇಕಾಗುತ್ತದೆ. ಸದರಿ ನಮೂನೆಯು ಲೆಕ್ಕಪರಿಶೋಧಕರ ಹತ್ತಿರ ಇರುತ್ತದೆ. ಸದರಿ ನಮೂನೆಯನ್ನು ಸಹಕಾರಿಯು ತನ್ನ ಮಾಹಿತಿಗಾಗಿ ಅವರಿಂದಾಗಲಿ ಅಥವಾ ಸಂಯುಕ್ತ ಸಹಕಾರಿಯಿಂದಾಗಲಿ ಪಡೆಯಬಹುದಾಗಿದೆ. ಅಲ್ಲದೇ ಸಹಕಾರಿಯ ಪದಾಧಿಕಾರಿಗಳು, ನೌಕರರು ಲೆಕ್ಕಪರಿಶೋಧಕರಿಗೆ ಕೊಡಬೇಕಾದ ಮಾಹಿತಿಗಳನ್ನು, ವಿವರಗಳನ್ನು, ಕಾಗದಪತ್ರಗಳನ್ನು, ಪುಸ್ತಕಗಳನ್ನು, ದಾಖಲಾತಿಗಳನ್ನು ಸರಿಯಾಗಿ ಸಮಯಕ್ಕೆ ಕೊಡದೇ ಇದ್ದಲ್ಲಿ ಅವರು ಅಸಹಾಯಕರಾಗಿ "ಸಹಕಾರಿಯು ತಮಗೆ ಸದರಿ, ಸದರಿ ಮಾಹಿತಿಗಳನ್ನು ಪೂರೈಸಿಲ್ಲ". "ಸದರಿ ಮಾಹಿತಿಯು ಲೆಕ್ಕಪರಿಶೋಧನೆಗೆ ಲಭ್ಯವಾಗಿಲ್ಲ" ಎಂದು ವರದಿಯಲ್ಲಿ ಅನಿವಾರ್ಯವಾಗಿ ನಮೂದಿಸಬೇಕಾಗುತ್ತದೆ ಹಾಗೂ ಅಂತಹ ಪ್ರಸಂಗ ಬಂದಲ್ಲಿ ನಮೂದಿಸುತ್ತಾರೆ.

ಮುಂದಿನ ಪುಟಕ್ಕೆ...

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

ಲೆಕ್ಕಪರಿಶೋಧಕರಿಗೆ ಮಾಹಿತಿ...

...ಹಿಂದಿನ ಪುಟದಿಂದ

ಇದರಿಂದಾಗಿ ಲೆಕ್ಕಪರಿಶೋಧಕರು ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಸಂಯುಕ್ತ ಸಹಕಾರಿಯ ಮಾರ್ಗದರ್ಶಿಗಳ ಪ್ರಕಾರ ಅವರ ನಮೂನೆಯಲ್ಲಿ ಕೊಡಲು ಸಾಧ್ಯವಾಗುವುದಿಲ್ಲ.

ಸಂಯುಕ್ತ ಸಹಕಾರಿಯು ತಾನು ಹೊರಡಿಸಿದ ಮಾರ್ಗದರ್ಶಿ ಪ್ರಕಾರ, ಪರಿಪತ್ರದ ಪ್ರಕಾರ ಯಾವುದೇ ಸಹಕಾರಿಯ ಲೆಕ್ಕಪರಿಶೋಧನಾ ವರದಿಯು ತಾನು ನಿಗದಿಪಡಿಸಿದ ನಮೂನೆಯಲ್ಲಿ ಸರಿಯಾಗಿ, ಸಮರ್ಪಕವಾಗಿ, ಅರ್ಥಪೂರ್ಣವಾಗಿ ಇಲ್ಲದೇ ಇದ್ದಲ್ಲಿ ಹಾಗೂ ಆರ್ಥಿಕ ತಕ್ತೆಗಳು ಹಿಂದಿನ ವರ್ಷದ ಅಂಕಿಸಂಖ್ಯೆಗಳೊಂದಿಗೆ ತಾನು ಹಾಕಿದ ನಮೂನೆಯಲ್ಲಿ ಇರದಿದ್ದಲ್ಲಿ ಅಂತಹ ವರದಿಯನ್ನು ನೇರವಾಗಿ ತಿರಸ್ಕರಿಸುವ ಅಧಿಕಾರವನ್ನು ಅದು ಹೊಂದಿರುತ್ತದೆ. ಒಂದು ವೇಳೆ ಸಂಯುಕ್ತ ಸಹಕಾರಿಯು ಅಂತಹ ನಿರ್ಣಯವನ್ನು ತೆಗೆದುಕೊಂಡು ಸದರಿ ಸಹಕಾರಿಯ ಲೆಕ್ಕಪರಿಶೋಧನೆಯನ್ನು ಮತ್ತೊಮ್ಮೆ ಮಾಡಿಸಲು ನಿರ್ದೇಶನ ಮಾಡಬಹುದಾಗಿದೆ. ಹೀಗೆ ನಿರ್ದೇಶನ ಕೊಟ್ಟ ನಂತರ ಅಂತಹ ಸಹಕಾರಿಯು ತನ್ನ ಲೆಕ್ಕಪರಿಶೋಧನೆಯನ್ನು ಮತ್ತೊಮ್ಮೆ ಸರಿಯಾದ ರೀತಿಯಲ್ಲಿ ಮಾಡಿಸಬೇಕಾಗುತ್ತದೆ.

ಒಂದು ವೇಳೆ ಸಂಯುಕ್ತ ಸಹಕಾರಿಯ ನಿರ್ದೇಶನದ ಪ್ರಕಾರ ಲೆಕ್ಕಪರಿಶೋಧನೆಯನ್ನು ಮಾಡಿಸದಿದ್ದಲ್ಲಿ ಅಂತಹ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯು ತಾನೇ ಲೆಕ್ಕಪರಿಶೋಧಕರನ್ನು ನೇಮಿಸಿ ಲೆಕ್ಕಪರಿಶೋಧನೆ ಮಾಡಿಕೊಳ್ಳುವ ಅಧಿಕಾರ ಹೊಂದಿರುತ್ತದೆ. ಈ ತರಹದ ಎಲ್ಲ ಪ್ರಸಂಗಗಳಲ್ಲಿ ಸಹಕಾರಿಯು ತಾನು ಮಾಡಿದ ತಪ್ಪಿಗೆ ದುಬಾರಿ ಬೆಲೆ (ಖರ್ಚುಗಳನ್ನು) ಭರಿಸಬೇಕಾಗುತ್ತದೆ. ಸಹಕಾರಿಯು ಲೆಕ್ಕಪರಿಶೋಧಕರಿಗೆ ಸರಿಯಾಗಿ ಅವರು ಬೇಡಿದಾಗ ಸರಿಯಾಗಿ ಮಾಹಿತಿ ಕೊಡದಿದ್ದಲ್ಲಿ ಇದ-ರಿಂದಾಗಿ ಸಂಯುಕ್ತ ಸಹಕಾರಿಯು ನಮೂದಿಸಿದ ನಮೂನೆಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಲೆಕ್ಕಪರಿಶೋಧಕರು ತಯಾರಿಸದಿದ್ದಕ್ಕಾಗಿ ಇಂತಹ ಮೇಲಿನ ತೊಂದರೆಗಳನ್ನು ಸಹಕಾರಿಯು ಅನುಭವಿಸಬೇಕಾಗುತ್ತದೆ.

ಸಂಯುಕ್ತ ಸಹಕಾರಿಯು ಸಹಕಾರಿಗೆ ಮೇಲಿನಂತೆ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳಲು ಆದೇಶ ಹೊರಡಿಸಿದರೂ ಸಹಕಾರಿಯು ಸದರಿ ಆದೇಶವನ್ನು ಪಾಲಿಸದೇ ಲೆಕ್ಕಪರಿಶೋಧನೆ ಮಾಡಿಕೊಳ್ಳದೇ ಸಂಯುಕ್ತ ಸಹಕಾರಿಯ ಆದೇಶವನ್ನು ಉಲ್ಲಂಘಿಸಿದಕ್ಕಾಗಿ ಹಾಗೂ ಕಾನೂನು ಮತ್ತು ಪರಿಪತ್ರಗಳನ್ನು ಪಾಲಿಸದೇ ಇದ್ದುದಕ್ಕಾಗಿ ಸಂಯುಕ್ತ ಸಹಕಾರಿಯು ಕಾನೂನು ಕಲಂ 38 ರ ಪ್ರಕಾರ ಸಹಕಾರಿಯ ಆಡಳಿತ ಮಂಡಳಿಯನ್ನು ರದ್ದುಗೊಳಿಸಬಹುದಾಗಿದೆ ಹಾಗೂ ಈ ಮೊದಲು ಸಹಕಾರಿಯು ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನಾ ವೇಳೆಯಲ್ಲಿ ಸರಿಯಾದ ಮಾಹಿತಿ ಕೊಡದಿದ್ದರಿಂದ, ಸಹಕರಿಸದೇ ಇದ್ದುದರಿಂದ ಅವರ ಲೆಕ್ಕಪರಿಶೋಧನಾ ವರದಿಯಲ್ಲಿ ಸಹಕಾರಿಯು "ಮಾಹಿತಿ ಕೊಟ್ಟಿಲ್ಲ", "ಮಾಹಿತಿ ಲಭ್ಯವಾಗಿಲ್ಲ" ಎಂದು ಬರೆದ ಟಿಪ್ಪಣಿಯ ಆಧಾರದ ಮೇಲೆ ಕಾನೂನು ಕಲಂ 68 ರನ್ವಯ ಸದರಿ ಸಹಕಾರಿಯ ಮೇಲೆ ಕಾನೂನು ಕ್ರಮ ಜರುಗಿಸಬಹುದಾಗಿದೆ.

ಹೀಗೆ ಕ್ರಮ ಜರುಗಿಸಿದಲ್ಲಿ ಸಹಕಾರಿಯ ತಪ್ಪಿತಸ್ಥ ಪದಾಧಿಕಾರಿಗಳು, ಮ್ಯಾನೇಜರರು, ನೌಕರರಿಗೆ ನ್ಯಾಯಾಲಯವು ಅವರು ಮಾಡಿದ ಅಪರಾಧಗಳಿಗೆ ರೂ. 10000/- ದ ವರೆಗೆ ದಂಡ ಅಥವಾ 2 ವರ್ಷಗಳ ವರೆಗೆ ಕಾರಾಗೃಹ ವಾಸವನ್ನು ಇಲ್ಲವೇ ದಂಡ ಹಾಗೂ ಕಾರಾಗೃಹ ವಾಸ ಎರಡನ್ನೂ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

ಆದ್ದರಿಂದ ಸಹಕಾರಿಗಳು ತಮ್ಮ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಸರಿಯಾದ ರೀತಿಯಲ್ಲಿ ಲೆಕ್ಕಪರಿಶೋಧಕರಿಗೆ ಎಲ್ಲ ಮಾಹಿತಿಗಳನ್ನು ಪೂ-ರೈಸಿ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ನಮೂನೆಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ತಯಾರಿಸಿ ಲೆಕ್ಕಪರಿಶೋಧಕರೊಂದಿಗೆ ಸಹಕರಿಸಬೇಕು. ಹಾಗೂ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ನಮೂನೆಯಲ್ಲಿ ಹಿಂದಿನ ವರ್ಷದ ಅಂಕಿಸಂಖ್ಯೆಗಳ ಮಾಹಿತಿಯೊಂದಿಗೆ ತುಲನಾತ್ಮಕ ಪದ್ಧತಿಯಲ್ಲಿ ಆರ್ಥಿಕ ತಕ್ತೆಗಳನ್ನು ತಯಾರಿಸಿ ಲೆಕ್ಕಪರಿಶೋಧನಾ ವರದಿಯ ಜೊತೆಗೆ ಲಗತ್ತಿಸಲು ಲೆಕ್ಕಪರಿಶೋಧಕರಿಗೆ ಸಲ್ಲಿಸಬೇಕು. ಅವೆಲ್ಲವುಗಳನ್ನು ಅವರಿಂದ ಪ್ರಮಾಣೀಕಿಸಿಕೊಳ್ಳಬೇಕು.

ಹೀಗೆ ಅವಶ್ಯಕ ಕ್ರಮಗಳನ್ನು ಕೈಕೊಂಡಲ್ಲಿ ಸಹಕಾರಿಗೆ ಯಾವುದೇ ಅಡಚಣೆಗಳು, ತೊಂದರೆಗಳು ಬರುವುದಿಲಲ್ಲ

■

ಸಹಕಾರಿಗಳು ಈ ವಿಷಯಗಳನ್ನು ತಿಳಿದಿರಬೇಕು

...5ನೇ ಪುಟದಿಂದ

11. 1871ರಲ್ಲಿ ಸ್ಥಾಪಿತಗೊಂಡ ಸಹಕಾರಿ ಸಮಾಚಾರ (ಕೋ ಅಪರೇಟಿವ್ ನ್ಯೂಸ್) ಪ್ರಪಂಚದ ಅತಿ ದೊಡ್ಡ ಸಹಕಾರಿ ವಾರ್ತಾ ಪತ್ರಿಕೆಯಾಗಿರುತ್ತಾರೆ.
12. ಕೆನಡಾ ದೇಶದಲ್ಲಿ ಸಂಪೂರ್ಣವಾಗಿ ಗೋಧಿ ವ್ಯಾಪಾರವು ಅಲ್ಲಿಯ ಕೃಷಿ ಸಹಕಾರ ಸಂಘಗಳ ಮುಕಾಂತರವೇ ನಡೆಯುತ್ತದೆ.
13. ಅಂತರಾಷ್ಟ್ರೀಯ ಸುದ್ದಿ ಸಂಸ್ಥೆ (ಎಜೇನ್ಸಿ) ಆಸೋಸಿಯೇಟೆಡ್ ಪ್ರೇಸ್ ಒಂದು ಸಹಕಾರಿ ಸಂಸ್ಥೆಯಾಗಿರೆತ್ತದೆ.
14. ಯುರೋಪ್ ದೇಶದ ಎರಡನೆಯ ಅತಿ ದೊಡ್ಡ ಬ್ಯಾಂಕ್ (ಕ್ರೇಡಿಟ್ ಅಗ್ರೀಕೋಲ್) ಫ್ರಾನ್ಸ ದೇಶದ ರೈತರ ಒಡೆತನದ ಸಹಕಾರಿ ಸಂಸ್ಥೆಯಾಗಿರುತ್ತದೆ.

15 ಬ್ರಿಟನ್ ದೇಶದಲ್ಲಿ ಸಹಕಾರ ಸಂಸ್ಥೆಗಳು ಪ್ರತಿ ವರ್ಷ 30ದಶ ಲಕ್ಷ ಮಧ್ಯಮ ಬಾಟಲುಗಳನ್ನು (ಬಾಟ ಆಫ್ ವೈನ್ಸ) ಮಾರಾಟ ಮಾಡುತ್ತಿವೆ.

16 ಬ್ರಿಟನ್ ದೇಶದಲ್ಲಿ 1872ರಲ್ಲಿ ಸಹಕಾರಿ ಸಗಟು ಮಾರಾಟ ಸಂಘದಲ್ಲಿ ಸಾಲ ಮತ್ತು ಠೇವಣಿ ವಿಭಾಗ ಎಂಬ ಹೆಸರಿನಿಂದ ಸಹಕಾರಿ ಬ್ಯಾಂಕ್ ಸ್ಥಾಪಿಸಲ್ಪಟ್ಟಿತ್ತು.

17 ಬ್ರಿಟನ್ ದೇಶದಲ್ಲಿ 1920ರಲ್ಲಿ ಸಹಕಾರಿ ಸಂಸ್ಥೆಯ 'ಬೆಲ್' ಎಂಬ ಹೆಸರಿನಲ್ಲಿ (ಟ್ರೇಡ್ ಸೀಮ್ ಬೆಲ್) ಬೈಸಿಕಲ್ಲುಗಳನ್ನು, ಮೋಟಾರ್ ಸೈಕಲ್ ಮತ್ತು ಕಾರುಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.

18 ಹಾಲೆಂಡ ದೇಶದಲ್ಲಿ ರೋಟರ್ ಡ್ಯಾಮ್ ಹತ್ತಿರ ಒಂದು ರಾಷ್ಟ್ರೀಯ ಸಹಕಾರಿ ವಸ್ತು ಸಂಗ್ರಹಾಲಯವಿರುತ್ತದೆ.

19 ಡಾ. ವಿಲಿಯಮ್ ಕಿಂಗ್ ಎಂಬ ಬ್ರಿಟನ್ ವೈದ್ಯನು ತನ್ನ ಪುಸ್ತಕ ಪ್ರಕಟನೆಯ ಮೂಲಕ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸಲು ಅನೇಕ ಕಾರ್ಮಿಕ ಸದಸ್ಯರಿಗೆ ಸ್ಪೂರ್ತಿ ನೀಡಿ ಪ್ರಥಮ ಸಹಕಾರಿ ಪ್ರತಿಪಾದಕ ಎಂಬ ಕೀರ್ತಿಪಾತ್ರನಾಗಿರುತ್ತಾನೆ.

20 ಅಮೆರಿಕಾದಲ್ಲಿ ಬೃಹತ್ ವಿದ್ಯುತ್ ಉತ್ಪಾದನಾ ಕಂಪನಿಗಳು ವಿದ್ಯುತ್ತನ್ನು ಪೂರೈಸಲು ಅಸಮರ್ಥವಾದಾಗ, ಅಮೇರಿಕಾದ ರೈತರು ತಮ್ಮದೇ ಆದ ವಿದ್ಯುತ್ ಉತ್ಪಾದನಾ ಸಹಕಾರ ಸಂಸ್ಥೆಗಳನ್ನು ಪ್ರಾರಂಬಿಸಿದರು.

ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

ಅಧ್ಯಕ್ಷ	ಶ್ರೀ ಎಸ್. ಆರ್. ಸತೀಶಚಂದ್ರ	9448696108
ಉಪಾಧ್ಯಕ್ಷ	ಶ್ರೀ ಗುರುನಾಥ ಜ್ಯಾಂತಿಕರ	9448270104
ವ್ಯವಸ್ಥಾಪಕ ನಿರ್ದೇಶಕ	ಶ್ರೀ ಶರಣಗೌಡ ಜಿ. ಪಾಟೀಲ	9740401685
ಉಪ ಪ್ರಧಾನ ವ್ಯವಸ್ಥಾಪಕ	ಶ್ರೀ ನಾರಾಯಣ ಹೆಗಡೆ	9480579882
ಉಪ ಪ್ರಧಾನ ವ್ಯವಸ್ಥಾಪಕ	ಶ್ರೀ ವೈ. ಕುಮಾರ	9845893455
ತರಬೇತಿ ಅಧಿಕಾರಿ	ಶ್ರೀ ವಿ.ಜಿ. ಕಾರಕೂನ	9482734077
ಬೆಳಗಾವಿ ವಿಭಾಗಾಧಿಕಾರಿ	ಶ್ರೀ ಜಿ.ಎಸ್. ಟೋಪಣ್ಣನವರ್	9916367887

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ - 1. ದೂ. 0831-2401551

ಇವರಿಂದ ಪ್ರಕಟಿತ :
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು) ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 560010.
ದೂರವಾಣಿ ಸಂಖ್ಯೆಗಳು :
23378375/76/77/78/79/80 ಹಾಗೂ 23474408, 23573291
ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ,
ಸಂಚಿಕೆ ಸಿದ್ಧತೆ ವಿ.ಜಿ.ಕಾರಕೂನ
ಮುದ್ರಣ : ವರ್ಣ ಕಮ್ಯೂನಿಕೇಷನ್ಸ್, ಬೆಂಗಳೂರು.